ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 153

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

ಮಂಗಳವಾರ: 26-05-2026

# ಕೇಂದ್ರದಿಂದ ಸಾರ್ವಜನಿಕರ ಜೇಬಿಗೆ ಕತ್ತರಿ: ಸುರ್ಜೇವಾಲ ಆಕ್ರೋಶ

**ಬೆಂಗಳೂರು, ಮೇ. 25–** ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಯಾಗುತ್ತಿದ್ದರೂ, ದೇಶದಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಅಡುಗೆ ಅನಿಲ ದರವನ್ನು ನಿರಂತರವಾಗಿ ಹೆಚ್ಚಿಸುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರ ಸಾರ್ವಜನಿಕರ ಜೇಬಿಗೆ ಕತ್ತರಿ ಹಾಕುತ್ತಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಕೆಪಿಸಿಸಿ ಕಚೇರಿಯಲ್ಲಿಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, "ಕೇಂದ್ರದ ಬಿಜೆಪಿ ಸರ್ಕಾರಕ್ಕೆ ಲೂಟಿ ಹೊಡೆಯುವುದಕ್ಕೆ ಕೊನೆ ಎಂಬುದೇ ಇಲ್ಲದಂತಾಗಿದೆ. ಸಾರ್ವಜನಿಕರನ್ನು ನಿರಂತರವಾಗಿ ಲೂಟಿ ಮಾಡುತ್ತಿರುವ ಈ ನಡೆ ಸಂಪೂರ್ಣ ದೇಶವಿರೋಧಿಯಾಗಿದೆ," ಎಂದು ಕಿಡಿಕಾರಿದರು.

'ನಬಿನ್ ಬಂದ ಬೆನ್ನಲ್ಲೇ ಬೆಲೆ ಏರಿಕೆಯ ಗಿಫ್ಟ್'

ಬಿಜೆಪಿ ನಾಯಕರಾದ ನಿತೀನ್ ನಬಿನ್ ನಿನ್ನೆ ಬೆಂಗಳೂರಿಗೆ ಬಂದು ಹೋಗಿದ್ದಾರೆ. ಅವರು ಬಂದ ಬೆನ್ನಲ್ಲೇ ರಾಜ್ಯದಲ್ಲಿ ಬೆಲೆ ಏರಿಕೆಯ ಬರೆ ಎಳೆಯಲಾಗಿದೆ. ಇದು ಕನ್ನಡಿಗರಿಗೆ ಬಿಜೆಪಿ ನೀಡಿದ ಅಪ್ಪಟ 'ಕೊಡುಗೆ'ಯಾಗಿದೆ. ಇಷ್ಟೆಲ್ಲಾ ದರ ಹೆಚ್ಚಳ ಮಾಡಿ ಜನರ ಜೀವನದ ಜೊತೆ ಆಟವಾಡುತ್ತಿದ್ದರೂ, ಬಿಜೆಪಿ ನಾಯಕರು ಜನರನ್ನು ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಸುರ್ಜೇವಾಲಾ ತರಾಟೆಗೆ ತೆಗೆದುಕೊಂಡರು.

ಯುಪಿಎ ಸರ್ಕಾರದ ಅವಧಿಯಲ್ಲಿ ಕಚ್ಚಾ ತೈಲ ಬೆಲೆ ಬ್ಯಾರಲ್‌ಗೆ ಬರೋಬ್ಬರಿ 108 ಡಾಲರ್ ಇತ್ತು. ಆದರೂ ಆಗ ಜನಸಾಮಾನ್ಯರ ಮೇಲೆ ಹೊರೆ ಹಾಕಿರಲಿಲ್ಲ. ಸದ್ಯ ಕಚ್ಚಾ ತೈಲ ಬೆಲೆ ಬ್ಯಾರಲ್‌ಗೆ 97.06 ಡಾಲರ್ ಆಸುಪಾಸಿನಲ್ಲಿದೆ. ಹೀಗಿದ್ದೂ ದೇಶದಲ್ಲಿ ಪೆಟ್ರೋಲ್ ಬೆಲೆ ಲೀಟರ್‌ಗೆ 110 ರೂಪಾಯಿ ದಾಟಿದೆ. ಕಳೆದ 11 ದಿನಗಳಲ್ಲೇ ಸತತ 4 ಬಾರಿ ಬೆಲೆ ಏರಿಕೆ ಮಾಡಲಾಗಿದ್ದು, ಇದು 70 ವರ್ಷಗಳ ಇತಿಹಾಸದಲ್ಲೇ ಅತಿ ದೊಡ್ಡ ಏರಿಕೆಯಾಗಿದೆ ಎಂದು ಸುರ್ಜೇವಾಲಾ ಅಂಕಿ–ಅಂಶಗಳ ಸಮೇತ ವಿವರಿಸಿದರು.

"ನಮ್ಮ ಅವಧಿಯಲ್ಲಿ ಲೀಟರ್ ಪೆಟ್ರೋಲ್ ಬೆಲೆ 71.41 ರೂಪಾಯಿ ಇತ್ತು. ಇತ್ತೀಚಿನವರೆಗೂ 98.88 ರೂಪಾಯಿ ಇದ್ದ ಬೆಲೆಯನ್ನು ಏಕಾಏಕಿ 110 ರೂಪಾಯಿಗೆ ಹೆಚ್ಚಿಸಲಾಗಿದೆ. 3.90 ಪೈಸೆ, 91 ಪೈಸೆ, 2 ರೂಪಾಯಿಯಂತೆ ಹಂತ ಹಂತವಾಗಿ ಸಾರ್ವಜನಿಕರಿಗೆ ಗೊತ್ತಾಗದಂತೆ ಬೆಲೆ ಏರಿಸಿ ವಂಚಿಸಲಾಗುತ್ತಿದೆ ಎಂದು ಅವರು ದೂರಿದರು.

ಸಿಲಿಂಡರ್, ಸಿಎನ್‌ಜಿ ದರ ಏರಿಕೆಗೆ ಹೋಟೆಲ್ ಉದ್ಯಮ ಕಂಗಾಲು

ಕೇವಲ ಇಂಧನ ಮಾತ್ರವಲ್ಲದೆ, ಅಡುಗೆ ಅನಿಲ (ಎಲ್‌ಪಿಜಿ) ಮತ್ತು ಸಿಎನ್‌ಜಿ ಬೆಲೆಯನ್ನೂ ಗಗನಕ್ಕೇರಿಸುವ ಮೂಲಕ ಕೇಂದ್ರ ಸರ್ಕಾರ ಜನಸಾಮಾನ್ಯರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ. ಹಿಂದೆ 412 ರೂಪಾಯಿ ಇದ್ದ ಗೃಹಬಳಕೆಯ ಸಿಲಿಂಡರ್ ಬೆಲೆ ಈಗ ಸಾರ್ವಜನಿಕರಿಗೆ ಕೈಗೆಟುಕದಂತಾಗಿದೆ. ಇನ್ನು ಇತ್ತೀಚೆಗೆ ಐದು ಬಾರಿ ಕಮರ್ಷಿಯಲ್ ಸಿಲಿಂಡರ್ ಬೆಲೆ ಏರಿಕೆ ಮಾಡಲಾಗಿದ್ದು, ಸದ್ಯ ಅದರ ಬೆಲೆ 3,075 ರೂಪಾಯಿಗೆ ತಲುಪಿದೆ. ಇದರಿಂದಾಗಿ ಸಣ್ಣ ಪುಟ್ಟ ವ್ಯಾಪಾರಿಗಳು ಹಾಗೂ ಹೋಟೆಲ್ ಉದ್ಯಮಿಗಳು ಬೀದಿಗೆ ಬೀಳುವಂತಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರತಿದಿನ 1,000 ಕೋಟಿ ಲೂಟಿ ಆರೋಪ

ಕಳೆದ 12 ವರ್ಷಗಳಲ್ಲಿ ಕೇಂದ್ರ ಸರ್ಕಾರ ಇಂಧನ ಮತ್ತು ತೆರಿಗೆಗಳ ಮೂಲಕ ಬರೋಬ್ಬರಿ 57 ಲಕ್ಷ ಕೋಟಿ ರೂಪಾಯಿಗಳನ್ನು ಸಾರ್ವಜನಿಕರಿಂದ ಸಂಗ್ರಹಿಸಿದೆ. ಸದ್ಯ ಆರ್‌ಬಿಐನಲ್ಲೇ 14 ಲಕ್ಷ ಕೋಟಿ ರೂಪಾಯಿ ಹಣವಿದೆ. ದೇಶದ ಸಣ್ಣ ವ್ಯಾಪಾರಿಗಳು, ನೌಕರರು ಮತ್ತು ರೈತರಿಂದ ಪ್ರತಿದಿನ ಅಂದಾಜು 1,000 ಕೋಟಿ ರೂಪಾಯಿಗಳನ್ನು 2ನೇಪುಟಕ್ಕೆ

## ಸಿರವಾರ ಪಟ್ಟಣದಲ್ಲಿ ಇಂದು ವಿದ್ಯುತ್ ವ್ಯತ್ಯಯ: ಸಾರ್ವಜನಿಕರಿಗೆ ಜೆಸ್ಕಾಂ ಮನವಿ

ಸಿರವಾರ : ಪಟ್ಟಣದಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ನಡೆಯುತ್ತಿದ್ದು, ಈ ಹಿನ್ನೆಲೆಯಲ್ಲಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕೆಲಸ ಕೈಗೊಳ್ಳಲಾಗಿದೆ. ಈ ಕಾರಣದಿಂದಾಗಿ ಇಂದು ಸಿರವಾರ ಪಟ್ಟಣದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಜೆಸ್ಕಾಂ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (AEE) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯದ ವಿವರ: ದಿನಾಂಕ: 26 ಮೇ 2026 (ಮಂಗಳವಾರ) ಸಮಯ: ಬೆಳಿಗ್ಗೆ 10:00 ಗಂಟೆಯಿಂದ ಮಧ್ಯಾಹ್ನ 2:00 ಗಂಟೆಯವರೆಗೆ.

ವ್ಯಾಪ್ತಿ: ಭಾಗ್ಯನಗರ್ ಕೆನಲ್ನಿಂದ ದೇವದುರ್ಗ ಕ್ರಾಸ್ ವರೆಗೆ ರೋಡ್ ಅಗಲಿಕರಣ ವಿದ್ಯುತ್ ಕಂಬಗಳನ್ನು ಸ್ಥಳಾಂತರ

ರಸ್ತೆ ಅಗಲೀಕರಣ ಕಾಮಗಾರಿಯ ಹಿತದೃಷ್ಟಿಯಿಂದ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವುದು ಅನಿವಾರ್ಯವಾಗಿದೆ. ಆದ್ದರಿಂದ ಸಾರ್ವಜನಿಕರು ಮತ್ತು ಗ್ರಾಹಕರು ಸಹಕರಿಸಬೇಕೆಂದು ಜೆಸ್ಕಾಂ ಇಲಾಖೆಯ ಅಧಿಕಾರಿಗಳು ಮನವಿ ಮಾಡಿದ್ದಾರೆ.

## ಸೇನೆಯನ್ನು ಸೇರಿರಿ ದೇಶದ ರಕ್ಷಣೆಗೆ ದುಡಿಯಿರಿ ಡಾ. ಬಿರಾದಾರ




ಧೈರ್ಯದ ದಾರಿ

ದೇಶದ ಸಂರಕ್ಷಣೆಯಲ್ಲಿ ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಿದೆ .ಅದರಲ್ಲೂ ಸಹ ವಿಶೇಷವಾಗಿ ಭೂದಳ. ವಾಯುದಳ .ಮತ್ತು ನೌಕಾದಳ ಮೂರು. ಸೇನಾ ಪಡೆಗಳು ನಿರಂತರವಾಗಿ ಇದರಲ್ಲಿ ಕಾರ್ಯ ಮಾಡುತ್ತಿರುವ .ಸಕಲ ಸೈನಿಕರು ದೇಶದ ರಕ್ಷಣೆಗಾಗಿ ಹಗಲು ರಾತ್ರಿ ಕಾರ್ಯವನ್ನ ನಿರ್ವಹಿಸುತ್ತಿದ್ದಾರೆ. ವಿಶೇಷವಾಗಿ ರಾಯಚೂರು ಜಿಲ್ಲೆಯಿಂದ ಹಲವಾರು ಜನ ಅಗ್ನಿವೀರ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಿದ್ದ ಅಂತವರು ಹೇಗೆ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಹೊಂದಿರಬೇಕು ಈ ಸಾಮರ್ಥ್ಯದ ಪರೀಕ್ಷೆಗಳು ಹೇಗೆ ಎದುರಿಸಬೇಕು ಎಂಬ ವಿಷಯದ ಕುರಿತು ಮಹತ್ವದ ಕಾರ್ಯಾಗಾರವನ್ನ ಇವತ್ತು ರಾಯಚೂರಿನ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಜಿಲ್ಲಾ ಘಟಕ ಎ ಆರ್ ಓ ಬೆಳಗಾಂ ಮತ್ತು 35 ಎನಸಿ.ಸಿ 35. ಆಶ್ರಯದಲ್ಲಿ ಮಹತ್ವದ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು ದೇಶದ ರಕ್ಷಣೆಗೆ ಯುವಕರು ಯುವತಿಯರು ಒಂದಾಗಬೇಕು .ಊಟ ಮಾಡುವಾಗ ರೈತರನ್ನು ನೆನೆಸಬೇಕು. ಉಂಡು ಮಲಗುವಾಗ ಸೈನಿಕರ ನ್ನು ನೆನೆಸಬೇಕು ಎನ್ನುವಂತೆ. ನಾವು ದೇಶದಲ್ಲಿ ಶಾಂತಿ .ಗಡಿಯಲ್ಲಿ ಬಹಳ ಭದ್ರತೆ ಮತ್ತು ಶಾಂತಿ ಇದೆ ಎಂದರೆ ಅಲ್ಲಿ ನಮ್ಮ ಸೈನಿಕರ ಹಗಲು ರಾತ್ರಿ ಕೆಲಸ. ಆ ಹಿನ್ನೆಲೆಯಲ್ಲಿ ಅಗ್ನಿವೀರ ನೇಮಕಾತಿಗೆ ಅರ್ಜಿದ ಹಾಕಿದವರು ಪರೀಕ್ಷೆ ತಯಾರಿಕೆ ಅಗತ್ತಿರುವ ಪರಿಚಾತ್ಮಕ ಮಾರ್ಗದರ್ಶನ ಮತ್ತು ತರಬೇತಿಯನ್ನು ಹಾಗೂ ಅಗ್ನಿವೀರ ನೇಮಕಾತಿಯ ಪ್ರಕ್ರಿಯೆ ಬಗ್ಗೆ ಪರೀಕ್ಷೆಯ ಮಾದರಿ ತಯಾರಿಯ ತಂತ್ರಗಳು ಹಾಗೂ ದೈಹಿಕ ಮತ್ತು ಲಿಖಿತ ಪರೀಕ್ಷೆಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಲಿದ್ದಾರೆ ಈ ತರಬೇತಿಯ ಕಾರ್ಯಾಗಾರದ ಲಾಭವನ್ನು ಪಡೆದುಕೊಂಡು 2ನೇ ಪುಟಕ್ಕೆ

# ಮಲ್ಲಟ–ಬಲ್ಲಟಗಿ ರಸ್ತೆ ಸೇತುವೆ ಶಿಥಿಲ: ಸಾರ್ವಜನಿಕರಲ್ಲಿ ಆತಂಕ

ಧೈರ್ಯದ ದಾರಿ

**ಮಾನ್ವಿ:** ಮಲ್ಲಟದಿಂದ ಬಲ್ಲಟಗಿ ಹಾಗೂ ನುಗುಡೋಣಿ ಹೊಸೂರು ಸೇರಿದಂತೆ ಹಲವಾರು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆ ಮಧ್ಯದಲ್ಲಿರುವ ಕಾಲುವೆ ಸೇತುವೆ ಕಳೆದ ನಾಲ್ಕು ವರ್ಷಗಳಿಂದ ಶಿಥಿಲಾವಸ್ಥೆಗೆ ತಲುಪಿದ್ದು, ಸಾರ್ವಜನಿಕರಲ್ಲಿ ಭಾರೀ ಆತಂಕಕ್ಕೆ ಕಾರಣವಾಗಿದೆ.

ಸೇತುವೆಯ ಮೇಲ್ಭಾಗದಲ್ಲಿ ದೊಡ್ಡ ಗಾತ್ರದ ಗುಂಡಿಗಳು ಉಂಟಾಗಿದ್ದು, ಸೇತುವೆಗೆ ಆಸರೆಯಾಗಿರುವ ಕೆಳಭಾಗದ ಸ್ತಂಭದಲ್ಲಿಯೂ ಬಿರುಕು ಕಾಣಿಸಿಕೊಂಡಿದೆ. ಪ್ರತಿದಿನ ಶಾಲಾ ಬಸ್‌ಗಳು, ರೈತರ ಟ್ರ್ಯಾಕ್ಟರ್‌ಗಳು, ದ್ವಿಚಕ್ರ ವಾಹನಗಳು, ಆಂಬುಲೆನ್ಸ್‌ಗಳು ಸೇರಿದಂತೆ ಭಾರಿ ವಾಹನಗಳು ಇದೇ ಸೇತುವೆಯ ಮೇಲೆ ಸಂಚರಿಸುತ್ತಿವೆ.

ಇದೀಗ ಮಳೆಗಾಲ ಆರಂಭವಾಗಿರುವ ಹಿನ್ನೆಲೆ ಸೇತುವೆಯ ಮೇಲಿನ ಗುಂಡಿಗಳಲ್ಲಿ ನೀರು ನಿಂತುಕೊಳ್ಳುತ್ತಿದ್ದು, ವಾಹನ ಸವಾರರಿಗೆ ತೀವ್ರ ತೊಂದರೆ ಉಂಟಾಗುತ್ತಿದೆ. ಅಪಘಾತ ಸಂಭವಿಸುವ ಭೀತಿ ಕೂಡ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದು ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಕೇವಲ ಸೂಚನಾ ಫಲಕ ಅಳವಡಿಸಿ ಕೈಕಟ್ಟಿ ಕುಳಿತಿದ್ದು, ಇದುವರೆಗೆ ಯಾವುದೇ ಶಾಶ್ವತ ಪರಿಹಾರ ಕ್ರಮ ಕೈಗೊಂಡಿಲ್ಲ ಎಂಬ ಆರೋಪ ಕೇಳಿಬರುತ್ತಿದೆ.



ಸೇತುವೆ ಸಂಪೂರ್ಣ ಶಕ್ತಿಯನ್ನು ಕಳೆದುಕೊಂಡು ಕುಸಿಯುವ ಹಂತ ತಲುಪಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ತಕ್ಷಣ ಕ್ರಮ ಕೈಗೊಂಡು ಸೇತುವೆ ದುರಸ್ತಿ ಮಾಡಿಸಿ ಸಾರ್ವಜನಿಕರಿಗೆ ಸುರಕ್ಷಿತ ಸಂಚಾರ ವ್ಯವಸ್ಥೆ ಕಲ್ಪಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.




ಒಂದು ವೇಳೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಸಾರ್ವಜನಿಕರ ಪ್ರಾಣಹಾನಿ ಸಂಭವಿಸಿದರೆ ಅದರ ಸಂಪೂರ್ಣ ಹೊಣೆ ಸಂಬಂಧಪಟ್ಟ ಇಲಾಖೆಯ ಮೇಲಾಗಿರುತ್ತದೆ ಎಂದು ಸ್ಥಳೀಯರು ಎಚ್ಚರಿಸಿದ್ದಾರೆ.

# ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ 13ನೇ ತಾಲೂಕು ಮಟ್ಟದ ಸಮ್ಮೇಳನ

ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ಪೋತ್ನಾಳ್ ಗ್ರಾಮದ ಶ್ರೀ ಪಂಕ್ಷನ್ ಹಾಲ್ ಸಭಾಂಗಣದಲ್ಲಿ ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ 13ನೇ ತಾಲೂಕು ಮಟ್ಟದ ಸಮ್ಮೇಳನವನ್ನು ಕಮ್ಯುನಿಸ್ಟ್ ಪಾರ್ಟಿಯ ರಾಜ್ಯ ಸಮಿತಿ ಸದಸ್ಯ ಎಂ.ಗಂಗಾಧರ್ ಉದ್ಘಾಟಿಸಿ ಮಾತನಾಡಿ ಕೇಂದ್ರದಲ್ಲಿನ ಬಿಜೆಪಿ ಸರಕಾರ ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರಗಳು ದೇಶದ ಪ್ರಜಾಪ್ರಭುತ್ವದ ಮೂಲ ಮೌಲ್ಯಗಳನ್ನೇ ದುರ್ಬಲಗೊಳಿಸಿ. ರೈತ,ಕಾರ್ಮಿಕರ ಹಕ್ಕುಗಳನ್ನು ಕಸಿದು ,ಸಾಮಾನ್ಯ ಜನರ ಬದುಕು ಹಾಳುಮಾಡಿ, ಬಹುರಾಷ್ಟ್ರೀಯ ಕಂಪನಿಗಳಿಗೆ ಅಗತ್ಯ ಸೌಲಭ್ಯಗಳನ್ನು ನೀಡಿ ಅವುಗಳ ಲಾಭಕ್ಕಾಗಿ ಆಡಳಿತ ನಡೆಸುತ್ತಿವೆ. ದೇಶದಲ್ಲಿ ನಿರುದ್ಯೋಗ, ಬೆಲೆ ಏರಿಕೆ, ಖಾಸಗೀಕರಣ, ರೈತರ ಸಾಲಬಾಧೆ, ಕಾರ್ಮಿಕರ ಶೋಷಣೆ ನಿರಂತರವಾಗಿ ನಡೆಯುತ್ತಿದೆ. ರೈತರ ಕೃಷಿ ಭೂಮಿಯನ್ನು ಕಸಿದುಕೊಳ್ಳುವುದಕ್ಕಾಗಿಯೇ ರೈತಪರ ಹಾಗೂ ಕಾರ್ಮಿಕರ ಪರ ನೀತಿಗಳನ್ನು ಹಾಗೂ ಕಾನೂನುಗಳನ್ನು ದುರ್ಬಲಗೊಳಿಸಿ. ಸರಕಾರಿ ಸಂಸ್ಥೆಗಳ ಖಾಸಗೀಕರಣ, ಶಿಕ್ಷಣ,ಆರೋಗ್ಯ ಕ್ಷೇತ್ರಗಳ ವ್ಯಾಪಾರೀಕರಣ ಮಾಡುವ ಮೂಲಕ ಜನವಿರೋಧಿ ಆಡಳಿತವನ್ನು ನೀಡುತ್ತಿರುವ ಸರಕಾರಗಳ ವಿರುದ್ಧ ಹೋರಾಟ ನಡೆಸುವ ಹೋರಾಟಗಾರರನ್ನು, ವಿದ್ಯಾರ್ಥಿಗಳನ್ನು, ಕಾರ್ಮಿಕ ಸಂಘಟನೆಗಳನ್ನು, ಮಹಿಳೆಯರನ್ನು, ದಲಿತರನ್ನು, ಹಿಂದುಳಿದ ವರ್ಗಗಳವರನ್ನು ಮತ್ತು ಎಲ್ಲಾ ಶೋಷಿತ ಹಾಗೂ ಪ್ರಗತಿಪರ ಧ್ವನಿಗಳನ್ನು ಹತ್ತಿಕುವ ಕಾರ್ಯ ನಡೆಯುತ್ತಿದೆ. ದೇಶದ ಸಂಪತ್ತನ್ನು ಕೆಲವೇ ಬಂಡವಾಳಶಾಹಿಗಳ ಕೈಗೆ ಒಪ್ಪಿಸಿ, ದುಡಿಯುವ ವರ್ಗವನ್ನು ಸಂಕಷ್ಟಕ್ಕೆ ತಳ್ಳುತ್ತಿರುವ ಈ ಆಡಳಿತ ವ್ಯವಸ್ಥೆಯ ವಿರುದ್ಧ ಜನರನ್ನು ಒಗ್ಗೂಡಿಸಿ ಹೋರಾಟ ನಡೆಸಬೇಕಾಗಿದೆ ಎಂದು ಕರೆ ನೀಡಿದರು.

ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ , ಮಲ್ಲಯ್ಯ ಕಟ್ಟಿಮನಿ, ಮಾಬುಸಾಬ್ ಬೆಳ್ಳಟ್ಟಿ, ಗಿರೀಲಿಂಗಸ್ವಾಮಿ ಮಾತನಾಡಿದರು

ತಾಲೂಕು ಕಾರ್ಯದರ್ಶಿ ಕಾಂ. ಯಲ್ಲಪ್ಪ ಉಟಕನೂರು 2ನೇಪುಟಕ್ಕೆ



ಮೊದಲನೇ ಪುಟದಿಂದ

# ಕೇಂದ್ರದಿಂದ ಸಾರ್ವಜನಿಕರ ಜೇಬಿಗೆ ಕತ್ತರಿ: ಸುರ್ಜೇವಾಲ ಆಕ್ರೋಶ

ಲೂಟಿ ಮಾಡಲಾಗುತ್ತಿದೆ ಎಂದು ಅವರು ಗಂಭೀರ ಆರೋಪ ಮಾಡಿದರು.

ಸಿಎಂ ಆಕ್ರೋಶ: "ಕೇಂದ್ರದ ಬಿಜೆಪಿ ಸರ್ಕಾರವು ಪೆಟ್ರೋಲ್, ಡೀಸೆಲ್ ಹಾಗೂ ಗ್ಯಾಸ್ ಬೆಲೆಯನ್ನು ಸರಣಿಯಾಗಿ ಏರಿಸುವ ಮೂಲಕ ಸಾಮಾನ್ಯ ಜನರ ಮತ್ತು ಮಧ್ಯಮ ವರ್ಗದವರ ಜೀವನವನ್ನು ಅತ್ಯಂತ ದುಬಾರಿಯಾಗಿಸಿದೆ. ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೇಲೆ ದೇಶವನ್ನು ಸಂಪೂರ್ಣವಾಗಿ ಲೂಟಿ ಹೊಡೆಯುತ್ತಿದ್ದಾರೆ" ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇದೇ ಸಂದರ್ಭದಲ್ಲಿ ವಾಗ್ದಾಳಿ ನಡೆಸಿದರು.

"ದೇಶದ ಇತಿಹಾಸದಲ್ಲಿ ಹಿಂದೆಂದೂ ಇಷ್ಟು ದೊಡ್ಡ ಮಟ್ಟದ ಬೆಲೆ ಏರಿಕೆಯಾಗಿರಲಿಲ್ಲ. ಕೇವಲ ಕಳೆದ 11 ದಿನಗಳಲ್ಲಿ ಬರೋಬ್ಬರಿ ನಾಲ್ಕು ಬಾರಿ ತೈಲ ಬೆಲೆಯನ್ನು ಹೆಚ್ಚಿಸಲಾಗಿದೆ. ಇದರಿಂದಾಗಿ ಬೆಂಗಳೂರಿನಲ್ಲಿ ಪ್ರತಿ ಲೀಟರ್ ಪೆಟ್ರೋಲ್ ಬೆಲೆ 110.93 ಕ್ಕೆ ತಲುಪಿದೆ. ಇಷ್ಟು ಕಡಿಮೆ ಅವಧಿಯಲ್ಲಿ ತೈಲ ದರ ಬರೋಬ್ಬರಿ 7.52 ಪೈಸೆಯಷ್ಟು ಏರಿಕೆಯಾಗಿದೆ. ಇನ್ನು ಡೀಸೆಲ್ ಬೆಲೆಯೂ ಸಹ 98.89 ಪೈಸೆಗೆ ತಲುಪಿದ್ದು, ಬಹುಶಃ ಶೀಘ್ರದಲ್ಲೇ 100ರ ಗಡಿ ದಾಟಲಿದೆ. ಹಿಂದೆ ಎಲ್ಲಿಯೂ ಇಂತಹ ಪರಿಸ್ಥಿತಿ ಬಂದಿರಲಿಲ್ಲ" ಎಂದು ಸಿಎಂ ಆತಂಕ ವ್ಯಕ್ತಪಡಿಸಿದರು.

ಯುಪಿಎ ಸರ್ಕಾರದ ಅವಧಿಗೆ ಹೋಲಿಕೆ ಮಾಡಿದ ಮುಖ್ಯಮಂತ್ರಿಗಳು, "ಡಾ. ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಜಾಗತಿಕ ಮಾರುಕಟ್ಟೆಯಲ್ಲಿ ಕ್ರೂಡ್ ಆಯಿಲ್ (ಕಚ್ಚಾ ತೈಲ) ಬೆಲೆ ಗಗನಕ್ಕೇರಿತ್ತು. ಆದರೂ ಆಗ ದೇಶದಲ್ಲಿ ಪೆಟ್ರೋಲ್ ಬೆಲೆ ಕೇವಲ 71.41 ಪೈಸೆ ಹಾಗೂ ಡೀಸೆಲ್ ಬೆಲೆ 51.70 ಇತ್ತು. ಅಡುಗೆ ಅನಿಲ (ಸಿಲಿಂಡರ್) ಬೆಲೆ ಕೇವಲ 412 ಇತ್ತು. ಆದರೆ ಇವತ್ತು ಸಿಲಿಂಡರ್ ಬೆಲೆ 915.50 ಆಗಿದೆ. ಅಂದರೆ ಬರೋಬ್ಬರಿ 503 ರಷ್ಟು ದರ ಏರಿಕೆಯಾಗಿದೆ. ಇದಕ್ಕೆಲ್ಲ ಕಾರಣ ಯಾರು?" ಎಂದು ಪ್ರಶ್ನಿಸಿದರು.

"ಪ್ರಸ್ತುತ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ 60 ರಿಂದ 70 ಡಾಲರ್‌ಗೆ ಕುಸಿದಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ತೈಲ ಬೆಲೆ ಇಷ್ಟೊಂದು ಕಡಿಮೆಯಾಗಿದ್ದರೂ, ಕೇಂದ್ರ ಸರ್ಕಾರ ಮಾತ್ರ ದೇಶದಲ್ಲಿ ಪೆಟ್ರೋಲ್, ಡೀಸೆಲ್ ದರವನ್ನು ಇಳಿಸುತ್ತಿಲ್ಲ. ಕಚ್ಚಾ ತೈಲ ಅಗ್ಗವಾದ ಹಣದ ಲಾಭವನ್ನು ಜನ ಸಾಮಾನ್ಯರಿಗೆ ನೀಡದೆ ಮೋದಿ ಸರ್ಕಾರವೇ ಲೂಟಿ ಮಾಡುತ್ತಿದೆ. ಈ ತೈಲ ಬೆಲೆ ಏರಿಕೆಯಿಂದಾಗಿ ಸಾರಿಗೆ ವೆಚ್ಚ ಹೆಚ್ಚಾಗಿ ಇತರ ಎಲ್ಲಾ ಅಗತ್ಯ ವಸ್ತುಗಳ ಬೆಲೆಯೂ ಗಗನಕ್ಕೇರಲಿದೆ. ಇದರಿಂದ ಸಾಮಾನ್ಯ ಜನರೇ ಕಷ್ಟಕ್ಕೆ ಸಿಲುಕಲಿದ್ದಾರೆ" ಎಂದು ಸಿಎಂ ದೂರಿದರು.

ಅಧಿಕಾರಕ್ಕೆ ಬರುವ ಮುನ್ನ ನೀಡಿದ್ದ ಭರವಸೆಗಳನ್ನು ನೆನಪಿಸಿದ ಸಿದ್ದರಾಮಯ್ಯ, "ಬಿಜೆಪಿಯವರು ಅಧಿಕಾರಕ್ಕೆ ಬರುವ ಮುನ್ನ 'ಅಚ್ಛೇ ದಿನ್' (ಒಳ್ಳೆಯ ದಿನಗಳು) ತರುತ್ತೇವೆ ಎಂದಿದ್ದರು. 'ಗುಜರಾತ್ ಮಾದರಿ' ಸರ್ಕಾರ ತರುತ್ತೇವೆ ಎಂದು ದೊಡ್ಡ ದೊಡ್ಡ ಭರವಸೆಗಳನ್ನು ಕೊಟ್ಟಿದ್ದರು. ಹಿಂದೆ ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ತೈಲ ಬೆಲೆ ಏರಿಕೆಯಾದಾಗ ಆಗ ಗುಜರಾತ್ ಸಿಎಂ ಆಗಿದ್ದ ನರೇಂದ್ರ ಮೋದಿಯವರು ಏನೆಲ್ಲಾ ಮಾತನಾಡಿದ್ದರು ಎಂಬುದು ಇಡೀ ದೇಶಕ್ಕೆ ಗೊತ್ತಿದೆ. ಆದರೆ ಈಗ ತಾವೇ ಅಧಿಕಾರದಲ್ಲಿದ್ದುಕೊಂಡು ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುತ್ತಿದ್ದಾರೆ" ಎಂದು ಟೀಕಿಸಿದರು.

ಸುದ್ದಿಗೋಷ್ಠಿಯ ಕೊನೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಅಲ್ಲಿದ್ದ ಮಾಧ್ಯಮ ಪ್ರತಿನಿಧಿಗಳನ್ನೂ ನಗುತ್ತಲೇ ಕಾಲೆಳೆದರು. "ನೀವೆಲ್ಲರೂ ಸ್ಕೂಟರ್‌ನಲ್ಲೇ ಓಡಾಡ್ತೀರ ಅಲ್ವಾ? ನಿಮಗೂ ಈ ಬೆಲೆ ಏರಿಕೆಯ ಬಿಸಿ ತಟ್ಟಿದೆ ತಾನೇ? ಹಾಗಿದ್ದ ಮೇಲೆ ಇದರ ಬಗ್ಗೆ ಜನಸಾಮಾನ್ಯರಿಗೆ ಸರಿಯಾಗಿ ತಿಳಿಸಿ, ವರದಿ ಮಾಡಿ" ಎಂದು ಮಾರ್ಮಿಕವಾಗಿ ನುಡಿದರು.

# ಕಡು ಭ್ರಷ್ಟಾಚಾರಕ್ಕೆ ಸಾಕ್ಷಿಯಾದ ಉಟಕನೂರು ಗ್ರಾಮಾಡಳಿತಾಧಿಕಾರಿಗಳ ತನಿಖೆಗೆ ಆಗ್ರಹ


**"ಹಳ್ಳಿಗಳ ಅಭಿವೃದ್ಧಿ ಆದರೆ ದೇಶದ ಅಭಿವೃದ್ಧಿ ಆಗುತ್ತದೆ ಅನ್ನುವ ಸಾಮಾನ್ಯ ಮಾತು ಭ್ರಷ್ಟಾಚಾರದ ಕೂಪದಲ್ಲಿ ಬಿದ್ದು ನರಳುತ್ತಿದೆ"**




ಧೈರ್ಯದ ದಾರಿ

ಮಾನ್ವಿ: ತಾಲೂಕಿನ ಉಟಕನೂರು ಗ್ರಾಮ ಪಂಚಾಯಿತಿಯಲ್ಲಿ 15ನೇ ಹಣಕಾಸು ಯೋಜನೇಯ ಅನುದಾನ ಬಳಕೆಯಲ್ಲಿ ಅವ್ಯವಹಾರ ನಡೆದಿದೆ ಎಂದು ಆರೋಪ ಕೇಳಿ ಬರುತ್ತಲೇ ಇದೆ. ಅದೇ ರೀತಿ ಈ ವರ್ಷವು ನಡೆದಿದ್ದು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ತನಿಖೆ ನಡೆಸುವಂತೆ ಭೀಮ ಯುಗ ಸೇನೆಯ ಮುಖಂಡರಾದ ಬಸವರಾಜ ಬಾಗಲವಾಡ ಆಗ್ರಹಿಸಿದರು.

ಪತ್ರಿಕಾಭವನದಲ್ಲಿ ಇಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು 15ನೇ ಹಣಕಾಸಿನ ಯೋಜನೆಯಡಿಯಲ್ಲಿ 2025-26ನೇ ಸಾಲಿನ ಕೇಂದ್ರದ ಅನುದಾನ ರೂ.13,81,000 ಲಕ್ಷ ರೂಪಾಯಿ ಹಾಗೂ ರಾಜ್ಯದ ಅನುದಾನ ರೂ.12,00,000 ಲಕ್ಷ ರೂಪಾಯಿ ಅದೇ ರೀತಿ ಪ್ರಸ್ತುತ 2026-27ನೇ ಸಾಲಿನಲ್ಲಿ ರೂ.13,55,278 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ. ಆದರೆ ಕಾಮಗಾರಿಗಳ ಅನುಷ್ಠಾನದಲ್ಲಿ ಪಾರದರ್ಶಕತೆ ಇಲ್ಲದೆ ಅನುದಾನದ ಬಳಕೆ ನಡೆದಿದೆ ಆರೋಪಿಸಿದರು.





ಗ್ರಾಮ ಪಂಚಾಯಿತಿ ವತಿಯಿಂದ ಕೈಗೊಂಡ ಕೆಲ ಅಭಿವೃದ್ಧಿ ಕಾಮಗಾರಿಗಳು ಕೇವಲ ದಾಖಲೆಗಳಲ್ಲಿ ಮಾತ್ರ ಕಾಣುತ್ತಿದ್ದು ವಾಸ್ತವ ಚಿತ್ರಣ ಬೇರೆ ಇದೆ ಸ್ಥಳ ಪರಿಶೀಲನೆ ನಡೆಸಿದರೆ ನೈಜ ಸ್ಥಿತಿ ಬಯಲಾಗುತ್ತದೆ ಹೇಳಿದರು. ಅವೈಜ್ಞಾನಿಕ ಜೆಜೆಎಂ ಕುಡಿಯುವ ನೀರು ಕಾಮಗಾರಿ, ಹದಗೆಟ್ಟ ರಸ್ತೆ ದುರಸ್ಥಿ ಮಾಡಲು ಸಾಕಷ್ಟು ಹೋರಾಟ ಮನವಿ ಮಾಡಿದ್ದರೂ ಸ್ಪಂದನೆ ನೀಡುತ್ತಿಲ್ಲ, ಸ್ವಚ್ಛತಾ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡದೇ ಹಣ ದುರ್ಬಳಕೆ ಮಾಡಲಾಗಿದೆ ಎಂದು ಹೇಳಿದರು.ಹಿಂದಿನ ಗ್ರಾಮ ಪಂಚಾಯತಿ ಅಭಿರುದ್ಧಿ ಅಧಿಕಾರಿಗಳಾಗಿದ್ದ ಶ್ವೇತ ಕುಲಕರ್ಣಿ ನಾಗಭೂಷಣ್ ಕಾಂಬ್ಳೆ ಅವರ ಭ್ರಷ್ಟಾಚಾರ ಕಾಟಾಚಾರದ ತನಿಖೆ ಹಾಗೂ ಅವ್ಯವಹಾರ ಎಸಗಿದ ಹಣ ಜಪ್ತಿ ಮಾಡಿಕೊಳ್ಳದಿರುವ ಘಟನೆ ಮಾಸುವ ಮುನ್ನವೇ ಪ್ರಸ್ತುತ ಪಿಡಿಓ ಜುಬೇರ್ ನಾಯ್ಕ ಅವರ ಆಡಳಿತ ಅವಧಿಯಲ್ಲಿ ಮತ್ತೆ ಭ್ರಷ್ಟಾಚಾರ ನಡೆದಿರುವುದು ಈ ಫೆಡಂಭೂತ ಆಳವಾಗಿ ಬೇರು ಬಿಟ್ಟಿರುವುದು ಸಾರ್ವಜನಿಕರ ಬೇಸರಕ್ಕೆ ಕಾರಣವಾಗಿದೆ. ಇಷ್ಟೇ ಅಲ್ಲದೇ ಮಾಹಿತಿ ಹಕ್ಕು ಕಾಯಿದೆಯ ಉಲ್ಲಂಘನೆ ಕೂಡ ಮಾಡುತ್ತಿದ್ದಾರೆ. ಅನುದಾನ ಬಳಕೆಯ ಸಂಪೂರ್ಣ ಮಾಹಿತಿ ಸಾರ್ವಜನಿಕರಿಗೆ ನೀಡಲಾಗಿಲ್ಲ. ಕಾಮಗಾರಿಗಳ ವೆಚ್ಚ, ಟೆಂಡರ್ ಪ್ರಕ್ರಿಯೆ ಹಾಗೂ ಬಿಲ್ ಪಾವತಿ ವಿವರಗಳನ್ನು ಬಹಿರಂಗ ಪಡಿಸಬೇಕು ಎಂದು ಒತ್ತಾಯಿಸಿದರು.

ಈ ಕುರಿತು ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಇಲಾಖೆಯ ಹಿರಿಯ ಅಧಿಕಾರಿಗಳು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿ ಕೊಂಡಿದ್ದರೆ ಅದನ್ನು ವಾಪಸ್ ವಸೂಲಿ ಮಾಡಿ ಮೂಲ ಸೌಕರ್ಯ ಅಭಿರುದ್ಧಿಗೆ ಬಳಕೆ ಮಾಡಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ಸೇನೆಯ ಸದಸ್ಯರಾದ ಉಟಕನೂರಿನ ಶ್ರೀಶೈಲ, ಮರಿಬಸವ, ಮಂಜುನಾಥ, ಮರಿಬಸವ ಮಟ್ಟೂರು, ಭೀಮಪ್ಪ ಸೇರಿದಂತೆ ಇತರರು ಹಾಜರಿದ್ದರು.

# ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳಿಗೆ ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನ

**ರಾಯಚೂರು ಮೇ.25:** ರಾಯಚೂರಿನ ಗಿಲ್ಲೇಸೂಗೂರು ಶಿಶು ಅಭಿವೃದ್ಧಿ ಯೋಜನೆಯಡಿ 08 ಅಂಗನವಾಡಿ ಕಂ ಕ್ರಷ್ ಕೇಂದ್ರಗಳ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಲು ಆಫ್‌ಲೈನ್ ಮುಖಾಂತರ ಅರ್ಜಿ ಆಹ್ವಾನಿಸಲಾಗಿದೆ.ಆಸಕ್ತ ಅಭ್ಯರ್ಥಿಗಳು ಅರ್ಜಿಗಳನ್ನು ಕಚೇರಿಯಲ್ಲಿ ಪಡೆದುಕೊಂಡು ಮೇ.30 ರೊಳಗಾಗಿ ಈ ಕಚೇರಿಗೆ ಸಲ್ಲಿಸಬಹುದಾಗಿದೆ.ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಗಿಲ್ಲೇಸೂಗೂರು ಯೋಜನೆ ಆಶಾಪೂರು ಕ್ರಾಸ್ ಸ್ಟೇಷನ್ ರಸ್ತೆ ರಾಯಚೂರು ಇಲ್ಲಿಗೆ ಸಂಪರ್ಕಿಸಬಹುದಾಗಿದೆ ಎಂದು ಗಿಲ್ಲೇಸೂಗೂರುಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ 13ನೇ ತಾಲೂಕು ಮಟ್ಟದ ಸಮ್ಮೇಳನ

ಮಾನವಿ ತಾಲೂಕು ಸಮಿತಿ ವರದಿಯನ್ನು ಮಂಡಿಸಿ, ಚರ್ಚೆ ಮಾಡಿ ಅನುಮೋದನೆ ಪಡೆದರು.

ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ 13ನೇ ತಾಲೂಕು ಮಟ್ಟದ ಸಮ್ಮೇಳನದಲ್ಲಿ ಈ ಕೆಳಕಂಡ ನಿರ್ಣಯಗಳನ್ನು ಕೈಗೊಳ್ಳಲಾಯಿತು ತಾಲೂಕಿನಲ್ಲಿ ಅರ್ಜಿ ಸಲ್ಲಿಸಿ ಸರ್ಕಾರಿ ಭೂಮಿ ಸಾಗುವಳಿ ಮಾಡಿದ ಭೂ ಹೀನ ರೈತ ದಲಿತ ದಮನಿತರ ಭೂ ಪಟ್ಟಕ್ಕಾಗಿ ಹೋರಾಡುವುದು. ತಾಲೂಕಿನಲ್ಲಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಸಮರ್ಪಕ ಜಾರಿಗಾಗಿ ಒತ್ತಾಯಿಸಿ ಹೋರಾಡುವುದು. ಯುವಕರಿಗೆ ವಿದ್ಯೆ-ಉದ್ಯೋಗಕ್ಕಾಗಿ ಸರ್ಕಾರಿ ಕೈಗಾರಿಕೆಗಳನ್ನು ಸ್ಥಾಪಿಸಲು ಹೊರಡುವುದು. ತಾಲೂಕಿನಲ್ಲಿ ಮಹಿಳೆಯರ ಮೇಲಿನ ಹತ್ಯೆ, ಅತ್ಯಾಚಾರ ದೌರ್ಜನ್ಯದ ವಿರುದ್ಧ ಹೊರಡುವುದರೊಂದಿಗೆ ಲಿಂಗ ಸಮಾನತೆಗಾಗಿ ಹೋರಾಡುವುದು. ಆರ್ ಎಸ್ ಎಸ್ ಬಿಜೆಪಿ,ಹಿಂದುತ್ವ ಪ್ಯಾಸಿಸಂ ವಿರುದ್ಧ, ಸಂವಿಧಾನ ಉಳಿವಿಗಾಗಿ ಜಾತಿವಾದ, ಕೋಮುವಾದ, ಪ್ಯಾಸಿಸಂ ವಿರುದ್ಧ ಹೋರಾಡುವುದು. ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ ಎಸ್ ಐ ಆರ್ ರದ್ದುಗೊಳಿಸಲು ಹೋರಾಡುವುದು. ತಾಲೂಕಿನ ಎಲ್ಲಾ ಇಲಾಖೆಯ ಹೊರಗುತ್ತಿಗೆ ಕಾರ್ಮಿಕರನ್ನು ಖಾಯಂಗಾಗಿ ಹೊರಡುವುದು ಸೇರಿದಂತೆ ಇತರ ನಿರ್ಣಯಗಳನ್ನು ಅಂಗಿಕರಿಸಲಾಯಿತು.

ನೂತನ ಮಾನವಿ ತಾಲೂಕು ಸಮಿತಿಗೆ 11 ಜನರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ತಾಲೂಕು ಕಾರ್ಯದರ್ಶಿಯಾಗಿ ಯಲ್ಲಪ್ಪ ಉಟಕನೂರು ಸೇರಿದಂತೆ ರಾಮಕೃಷ್ಣ, ಮಲ್ಲನಗೌಡ, ರವಿ ಜಿನೂರು, ಪ್ರಕಾಶ್ ತಡಕಲ್, ಪ್ರಕಾಶ್ ದೋತರಬಂಡಿ, ದೇವರಾಜ್ ಪೋತ್ನಾಳ್, ಗುಂಡಪ್ಪ ಮುದ್ದನಗುಡ್ಡಿ, ಕರಿಬೀರಯ್ಯ ತಾತ, ಈರಣ್ಣ ಕುರ್ಡಿ, ಶಿವರಾಜ್ ಪೋತ್ನಾಳ್ ಇವರನ್ನು ಚುನಾಯಿಸಲಾಯಿತು.

16 ಜನರನ್ನು ಜಿಲ್ಲಾ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಆಯ್ಕೆಗೊಂಡರು.

ಸಿ.ಪಿ.ಐ.ಎಂ.ಎಲ್. ರೆಡ್ ಸ್ಟಾರ್ ಪಕ್ಷದ ದ್ವಜಾರೋಹಣದೊಂದಿಗೆ ಹೋರಾಡಿ ಮಡಿದ ಹುತಾತ್ಮರಿಗೆ ಮೌನಾಚರಣೆ, ಸ್ಮರಣೆ ಮಾಡಲಾಯಿತು. ಸಮ್ಮೇಳನ ಅಂತಾರಾಷ್ಟ್ರೀಯ ಗೀತೆಯೊಂದಿಗೆ ದ್ವಜ ಅವರೋಹಣ ಮಾಡುವುದರ ಮೂಲಕ ಸಮ್ಮೇಳನ ಮುಕ್ತಾಯವಾಯಿತು. ಮಾನವಿ ತಾಲೂಕಿನ ಪಕ್ಷದ ನೂರಾರು ಸದಸ್ಯರು ಸಮ್ಮೇಳನದಲ್ಲಿ ಭಾಗವಹಿಸಿದರು.

# ಸೇನೆಯನ್ನು ಸೇರಿರಿ ದೇಶದ ರಕ್ಷಣೆಗೆ ದುಡಿಯಿರಿ ಡಾ. ಬಿರಾದಾರ

ರಾಯಚೂರು ಜಿಲ್ಲೆಯಿಂದ ಹೆಚ್ಚು ಜನ ನೇಮಕಾತಿ ಆಗಬೇಕೆಂದು. ದಿನಾಂಕ 25.05.2025 ರಂದು ರಾಯಚೂರಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಬಸವೇಶ್ವರ ಪ್ರೇಕ್ಷಾ ಗಾರದಲ್ಲಿ ನಡೆದ ಅಗ್ನಿವೀರ ನೇಮಕಾತಿಯ ಕಾರ್ಯಾಗಾರವನ್ನು ಜ್ಯೋತಿಯನ್ನ ಬೆಳೆಗಿಸಿದ ಮೂಲಕ ಉದ್ಘಾಟಿಸಿದ ನಂತರ ರಾಯಚೂರು ಜಿಲ್ಲಾ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಶಿಕ್ಷಣ ವಿಭಾಗದ ಜಿಲ್ಲಾ ಸಂಚಾಲಕರಾದ ಡಾ. ದಂಡಪ್ಪ. ಬಿರಾದಾರ ಮಾತನಾಡಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷರಾದ ಚೆನ್ನಾ ರೆಡ್ಡಿ ಅವರು ಕಾರ್ಯಕ್ರಮದ ರೂಪರೇಶಿಗಳ ಕುರಿತು ಪ್ರಾಸ್ತಾವಿಕವಾಗಿ ಮಾತನಾಡುತ್ತ

ನಮ್ಮ ಭಾಗದ ಯುವಕ ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಒಂದು ಅಗ್ನಿವೀರ ಸ್ಪರ್ಧೆಯಲ್ಲಿ ಭಾಗವಹಿಸಿ ಹೆಚ್ಚು ಜನ ಯಶಸ್ವಿಯಾಗಿ ಈ.ಒಂದು ಸೇನೆಯ ಕಾರ್ಯನಿರ್ವಹಿಸಲು ಅನುಕೂಲವಾಗಲಿ ಎಂಬ ದೃಷ್ಟಿಕೋನದಿಂದ ಈ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ .ಮುಂದಿನ ದಿನ ಮತ್ತೊಂದು ಸಲ ಈ ಕಾರ್ಯವನ್ನು. ಆಯೋಜನೆಯನ್ನು ಮಾಡಲಾಗುತ್ತದೆ .ಎಂದು ಹೇಳಿದರು .ನಂತರ ಈ ಅಗ್ನಿವೀರ ನೇಮಕಾತಿ ಇದರಲ್ಲಿ ಅಭ್ಯರ್ಥಿಗಳು ಪಾಲಿಸಬೇಕಾದ ಅಂಶಗಳ ಕುರಿತು ಸುಬೇದಾರ್ ಮಣಿಸಿಂಗ್. ಹವಲ್ದಾರ್ ದಿಲೀಪ್ ಅವರು ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘದ ಪದಾಧಿಕಾರಿಗಳಾದ ದೇವರೆಡ್ಡಿ .ಕೆ.ಎಸ್. ರಾವ್ ನರಸಿಂಹಲು. ಸಿದ್ದಯ್ಯ ಸ್ವಾಮಿ ಹಾಗೂ ಎನ್ ಸಿ.ಸಿ.ಯ ಅಧಿಕಾರಿಗಳು ಹಾಗೂ ಅಲಿಮ ಮಲಬಾರ್ ಉಪಸ್ಥಿತರಿದ್ದರು.

# ಲೊಯೋಲ ಕಾಲೇಜಿನ ಸ್ನಾತಕ ಪದವಿಯ ಕಲಾ ವಿಭಾಗದ ವಿದ್ಯಾರ್ಥಿಗಳಿಂದ ಪ್ರಸ್ತುತಿ ಕಾರ್ಯಾಗಾರ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದ ಲೊಯೋಲ ಕಾಲೇಜಿನಲ್ಲಿ ಸ್ನಾತಕ ಪದವಿಯ ಕಲಾ ವಿಭಾಗದ ನಾಲ್ಕನೇ ಮತ್ತು ಆರನೇ ಸೆಮಿಸ್ಟರ್ ವಿದ್ಯಾರ್ಥಿಗಳಿಂದ ಏರ್ಪಡಿಸಲಾದ ಪ್ರಾಯೋಗಿಕ ಕಾರ್ಯ ಮತ್ತು ಕ್ಷೇತ್ರ ಅಧ್ಯಯನ ವಿಷಯಗಳ ಪ್ರಸ್ತುತಿ ಕಾರ್ಯಾಗಾರವನ್ನು ಉದ್ಘಾಟಿಸಿ ಲೊಯೋಲ ಕಾಲೇಜಿನ ಪ್ರಾಂಶುಪಾಲರಾದ ಫಾ. ವಿನೋದ್ ಪೌಲ್ ಮಾತನಾಡಿ ಸಂತ್ ಇಗ್ನೇಶಿಯಸ್ ಲೊಯೋಲ ಅವರ ಬೋಧನಾ ಕ್ರಮಗಳಾದ ಸಂದರ್ಭ, ಅನುಭವ, ಚಿಂತನೆ, ಕಾರ್ಯೋನ್ಮುಖ ಮತ್ತು ಮೌಲ್ಯಮಾಪನಗಳು ಮತ್ತು ಕ್ಷೇತ್ರ ಅಧ್ಯಯನಗಳ ಸಮ್ಮಿಲನವು ಗುಣಮಟ್ಟದ ಶಿಕ್ಷಣಕ್ಕೆ ಭದ್ರ ಬುನಾದಿಯಾಗಿದೆ. ಇದು ವಿದ್ಯಾರ್ಥಿಗಳಲ್ಲಿ ಆಂತರಿಕ ಪರಿವರ್ತನೆಯನ್ನು ತಂದು, ಅವರನ್ನು ಸಮಾಜಮುಖಿ ಆಲೋಚನೆಯುಳ್ಳ ಉತ್ತಮ ನಾಯಕರನ್ನಾಗಿ ರೂಪಿಸಲು ಯಶಸ್ವಿಯಾಗುತ್ತದೆ ಲೊಯೋಲ ಶಿಕ್ಷಣ ಸಂಸ್ಥೆಗಳ ಶಿಕ್ಷಣದ ಮುಖ್ಯ ಉದ್ದೇಶವೇ ನಮ್ಮ ಹಳೆಯ ಹಾಗೂ ಸಂಕುಚಿತ ವಿಚಾರಗಳನ್ನು ಬದಲಾಯಿಸಿ, ಮುಕ್ತ ಮತ್ತು ಪ್ರಗತಿಪರ ಆಲೋಚನೆಗಳನ್ನು ಅಳವಡಿಸಿಕೊಳ್ಳುವುದಾಗಿದೆ. ವಿದ್ಯಾರ್ಥಿಗಳು ಕೇವಲ ಬದಲಾವಣೆಯನ್ನು ಬಯಸುವವರಾಗದೆ, ತಾವೇ ಸ್ವತಃ ಮುಂಚೂಣಿಯಲ್ಲಿ ನಿಂತು ಸಮಾಜವನ್ನು ಮುನ್ನಡೆಸುವ ಬದಲಾವಣೆಯ ನಾಯಕರಾಗಬೇಕು. ಸಮಾಜಕ್ಕೆ ಕೇವಲ ನಾಯಕರನ್ನಲ್ಲ, ಬದಲಿಗೆ ನೈತಿಕ ಮೌಲ್ಯಗಳುಳ್ಳ, ಸಹಾನುಭೂತಿ ಹಾಗೂ ದಕ್ಷತೆಯುಳ್ಳ ಉತ್ತಮ ನಾಯಕರನ್ನು ಕೊಡುವುದು ನಮ್ಮ ಆಶಯವಾಗಿದೆ ಎಂದು ತಿಳಿಸಿದರು.

ಮಾನ್ವಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ ಸೈಯದ್ ಮುಜೀಬ್ ಅಹ್ಮದ್ ಮಾತನಾಡಿ ವಿದ್ಯಾರ್ಥಿಗಳು ಕೇವಲ ಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಹೊಸ ಆಲೋಚನೆಗಳನ್ನು ಹುಟ್ಟುಹಾಕುವ ಮತ್ತು ಸತ್ಯವನ್ನು ಅನ್ವೇಷಿಸುವ ಸಂಶೋಧನಾ ಪ್ರವೃತ್ತಿಯತ್ತ ಮುಖ ಮಾಡಬೇಕು. ಶಿಸ್ತು, ಸಂಯಮ ಮತ್ತು ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡು, ಭಾಷೆ ಹಾಗೂ ಸಮುದಾಯದ ಪ್ರಜ್ಞೆಯೊಂದಿಗೆ ಸಂಶೋಧನಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ಆರೋಗ್ಯವಂತ ಮತ್ತು ಪ್ರಗತಿಪರ ಸಮಾಜದ ನಿರ್ಮಾಣ ಸಾಧ್ಯವಾಗಲಿದೆ ಎಂದು ತಿಳಿಸಿದರು.

ಮಾನ್ವಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಚಂದ್ರು .ಎನ್. ಹೊಸೂರು ಮಾತನಾಡಿ, ಯಾವುದೇ ಒಂದು ಸಂಶೋಧನೆಯು ಜ್ಞಾನದ ಜೊತೆಗೆ ಜೀವನದ ಮೌಲ್ಯಗಳನ್ನು ಕಲಿಸುತ್ತದೆ. ಕಠಿಣ ಪರಿಸ್ಥಿತಿಗಳನ್ನು ಮತ್ತು ನೋವನ್ನು ಸಹಿಸಿಕೊಂಡಾಗ ಮಾತ್ರ ಕಲ್ಲು ಶಿಲೆಯಾಗಲು ಸಾಧ್ಯ ಎನ್ನುವಂತೆ, ಸಂಶೋಧನೆಯಲ್ಲಿನ ಸವಾಲುಗಳನ್ನು ಮೆಟ್ಟಿ ನಿಂತಾಗ ಮಾತ್ರ ಉನ್ನತ ಫಲಿತಾಂಶವನ್ನು ಸಾಧಿಸಲು ಸಾಧ್ಯ ಎಂದು ಹೇಳಿದರು.

ಮಾನ್ವಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಬಸವರಾಜ ಸುಂಕೇಶ್ವರ ಮಾತನಾಡಿ, ವಿದ್ಯಾರ್ಥಿಗಳು ಕ್ಷೇತ್ರ ಅಧ್ಯಯನ ಮತ್ತು ಪ್ರಾಯೋಗಿಕ ಕಾರ್ಯಗಳ ಮೂಲಕ ನೈಜ ಜಗತ್ತಿನ ಅನುಭವವನ್ನು ಪಡೆಯುವುದು ಇಂದಿನ ದಿನಗಳಲ್ಲಿ ಅತ್ಯಂತ ಅಗತ್ಯವಾಗಿದೆ. ಇದರಿಂದ ಶಿಸ್ತುಬದ್ಧ ಜೀವನವು ಯಶಸ್ಸಿಗೆ ದಾರಿಯಾದರೆ, ಕಠಿಣ ಪರಿಸ್ಥಿತಿಗಳಲ್ಲಿ ತಾಳ್ಮೆಯಿಂದ ವರ್ತಿಸುವ ಸಂಯಮವು ವ್ಯಕ್ತಿಯ ನಾಯಕತ್ವ ಗುಣವನ್ನು ಹೆಚ್ಚಿಸುತ್ತದೆ. ಇವೆರಡೂ ಉತ್ತಮ ನಾಗರಿಕನ ನಿರ್ಮಾಣಕ್ಕೆ ಅತ್ಯಗತ್ಯ. ಎಂದು ಹೇಳಿದರು.

ಮಾನ್ವಿಯ ಶ್ರೀ ವೆಂಕಟೇಶ್ವರ ಪದವಿ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಹುಲಿಯಪ್ಪ ದುಮತಿ ಮಾತನಾಡಿ, ಕ್ಷೇತ್ರ ಅಧ್ಯಯನವು ವಿದ್ಯಾರ್ಥಿಗಳಲ್ಲಿ ಸಂಶೋಧನಾ ಪ್ರವೃತ್ತಿ, ದತ್ತಾಂಶ ಸಂಗ್ರಹಣೆ ಮತ್ತು ವಿಶ್ಲೇಷಣಾ ಸಾಮರ್ಥ್ಯವನ್ನು ಹೆಚ್ಚಿಸಲು ಸಹಕಾರಿಯಾಗಿದೆ. ಅಧ್ಯಯನದ ಪ್ರಸ್ತುತಿಯು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಹಾಗೂ ಸಂವಹನ ಕೌಶಲ್ಯವನ್ನು ಉತ್ತಮಗೊಳಿಸುತ್ತದೆ ಎಂದರು.

ಲೊಯೋಲ ಕಾಲೇಜಿನ ಸ್ನಾತಕ ಪದವಿಯ ಕಲಾ ವಿಭಾಗದ ನಾಲ್ಕನೇ ಮತ್ತು ಆರನೆಯ ಸೆಮಿಸ್ಟರ್ ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರ ಅಧ್ಯಯನದ ವಿಷಯಗಳನ್ನು ಮತ್ತು ಪ್ರಾಯೋಗಿಕ ಕಾರ್ಯಗಳನ್ನು ಅಚ್ಚುಕಟ್ಟಾಗಿ ಕಾರ್ಯಗಾರದಲ್ಲಿ ಪ್ರಸ್ತುತಿ ಪಡಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಉಪಪ್ರಾಚಾರ್ಯರಾದ ಖಾಸಿಂಸಾಬ್, ಕಲಾವಿಭಾಗದ ಮುಖ್ಯಸ್ಥರಾದ ದೇವಣ್ಣ ಹಾಗೂ ಕಾಲೇಜಿನ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಇದ್ದರು.

# ಜೀವನದ ಯಶಸ್ಸಿಗೆ ಶಿಕ್ಷಣವೇ ಪ್ರಮುಖ ಅಸ್ತ್ರ : ಶಾಸಕ ಲಕ್ಷ್ಮಣ ಸವದಿ

**ಅಥಣಿ : ಮೇ.25:**ವಿದ್ಯಾರ್ಥಿಗಳು ವಿದ್ಯೆಯ ಜೊತೆಗೆ ಪರಿಶ್ರಮ. ಸಂಯಮ. ಸಂಸ್ಕಾರ, ಶಿಸ್ತು ಹಾಗೂ ಮಾನವೀಯ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು, ತಂದೆ ತಾಯಿ, ಗುರು ಹಿರಿಯರನ್ನು ಗೌರವಿಸಬೇಕು. ಸತತ ಅಧ್ಯಯನದ ಮೂಲಕ ಉತ್ತಮ ಸಾಧನೆ ಮಾಡಬೇಕು. ಜೀವನದ ಯಶಸ್ಸಿಗೆ ಶಿಕ್ಷಣವೇ ಪ್ರಮುಖ ಅಸ್ತ್ರವಾಗಿದೆ. ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಲಭ್ಯವಿರುವ ಅವಕಾಶಗಳನ್ನು ಸದುಪಯೋಗಪಡಿಸಿಕೊಂಡು ಉನ್ನತ ಗುರಿಗಳನ್ನು ಸಾಧಿಸಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದರು.
ಅವರು ತಾಲೂಕಿನ ಹಲ್ಯಾಳದ ಕೃಷ್ಣಾ ರೈತ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಅಥಣಿ ತಾಲೂಕಿನ ಎಸ್.ಎಸ್.ಎಲ್.ಸಿ. ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ. 85 ಕ್ಕಿಂತ ಹೆಚ್ಚು ಅಂಕ ಪಡೆದ ಸುಮಾರು 2000ಕ್ಕೂ ಹೆಚ್ಚು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡುವ ಭವ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು. ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಮತ್ತು ಸಂಸ್ಕಾರದೊಂದಿಗೆ ಉತ್ತಮ ಶಿಕ್ಷಣ ಪಡೆದು ನಾಡಿಗೆ ಕೀರ್ತಿ ತರಬೇಕು. ನಿಮ್ಮ ತಂದೆ-ತಾಯಿಯರ ಕನಸುಗಳನ್ನು ನನಸು ಮಾಡುವ ಜವಾಬ್ದಾರಿ ನಿಮ್ಮ ಮೇಲಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಜಿಲ್ಲಾ ಮಟ್ಟದಲ್ಲಿ ಇರುವಂತಹ ಶಾಲೆ. ಕಾಲೇಜುಗಳು ನಮ್ಮ ತಾಲೂಕಿನಲ್ಲಿವೆ. ಇಡೀ ರಾಜ್ಯವೇ ನಮ್ಮ ತಾಲೂಕಿನ ಕಡೆ ನೋಡುವಂತಾಗಿದೆ ಎಂದರು.

"ಆಧುನಿಕ ಯುಗದಲ್ಲಿ ಕನ್ನಡದೊಂದಿಗೆ ಇಂಗ್ಲಿಷ್ ಭಾಷೆಯ ಜ್ಞಾನ ಅಗತ್ಯ"
ಈ ಹಿಂದೆ ಅಥಣಿ ತಾಲೂಕು ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದಿತ್ತು. ಆ ಪರಿಸ್ಥಿತಿ ಮರುಕಳಿಸಬಾರದು ಎಂಬ ದೃಢ ನಿರ್ಧಾರದಿಂದ ತಾಲೂಕಿನಲ್ಲಿ 9 ಪ್ರೌಢಶಾಲೆಗಳು ಮತ್ತು 3 ಕಾಲೇಜುಗಳನ್ನು ತೆರೆಯಲಾಗಿದೆ. ರೈತರ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂಬ ಉದ್ದೇಶದಿಂದ ಮುಂದಿನ ದಿನಗಳಲ್ಲಿ 1ನೇ ತರಗತಿಯಿಂದಲೇ ಕೆಪಿಎಸ್‌ಸಿ ಮಾದರಿಯ ಇಂಗ್ಲಿಷ್ ಶಾಲೆಗಳನ್ನು ಪ್ರಾರಂಭಿಸಲಾಗುವುದು. ಪ್ರತಿಯೊಂದು ಗ್ರಾಮದಲ್ಲೂ ಗುಣಮಟ್ಟದ ಶಿಕ್ಷಣ ಸಿಗುವಂತೆ ವ್ಯವಸ್ಥೆ ಮಾಡಲಾಗುವುದು ಎಂದು ಭರವಸೆ ನೀಡಿದರು.
ತಾಲೂಕಿನ ಕಟಗೇರಿ ಗ್ರಾಮದ ವಿದ್ಯಾರ್ಥಿನಿ 625ಕ್ಕೆ 625 ಅಂಕ ಪಡೆದು ರಾಜ್ಯಕ್ಕೆ ಕೀರ್ತಿ ತಂದಿರುವುದನ್ನು ಹಾಗೂ ಸವದಿ ಗ್ರಾಮದ ವಿದ್ಯಾರ್ಥಿ ಬಸವರಾಜ ಕೆಂಪವಾಡ. ರಾಷ್ಟ್ರಮಟ್ಟದ ಐಎಫ್‌ಎಸ್ ಪರೀಕ್ಷೆಯಲ್ಲಿ ದೇಶಕ್ಕೆ ಪ್ರಥಮ ಸ್ಥಾನ ಪಡೆದಿರುವುದು ನಮ್ಮೆಲ್ಲರಿಗೆ ಹೆಮ್ಮೆಯ ವಿಷಯ. ಅಲ್ಪಸಂಖ್ಯಾತರ ಸಮುದಾಯದವರು ಹಿಂದುಳಿಯಲು




ಶಿಕ್ಷಣದ ಕೊರತೆಯೇ ಪ್ರಮುಖ ಕಾರಣವಾಗಿದ್ದು. ಪ್ರತಿಯೊಬ್ಬರೂ ಶಿಕ್ಷಣದ ಸದುಪಯೋಗ ಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶೇಗುಣಸಿಯ ವಿರಕ್ತ ಮಠದ ಡಾ. ಮಹಾಂತಪ್ರಭು ಸ್ವಾಮಿಗಳು ಮಾತನಾಡಿ, ಶಾಸಕ ಲಕ್ಷ್ಮಣ ಸವದಿ ಅವರ ಜನಸಾಮಾನ್ಯರ ಕಷ್ಟಗಳಿಗೆ ಸ್ಪಂದಿಸುವ ಮೂಲಕ ಜನಮಾನಸದ ರಾಜಕಾರಣಿಯಾಗಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಬಗ್ಗೆ ದೂರದೃಷ್ಟಿ ಮತ್ತು ಜನರ ಕಷ್ಟಗಳಿಗೆ ಸ್ಪಂದಿಸುವವರೇ ನಿಜವಾದ ನಾಯಕರು. ಕೋವಿಡ್ ಸಂಕಷ್ಟದ ಸಮಯದಲ್ಲಿ ಜನರಿಗೆ ಆಹಾರ ಕಿಟ್ ವಿತರಿಸುವ ಮೂಲಕ ಸವದಿ ಅವರು ಜನಪರ ಕಾಳಜಿಯನ್ನು ಮೆರೆದಿದ್ದಾರೆ," ಎಂದರು

ಆನಂತರ ದಿವ್ಯ ಸಾನಿಧ್ಯ ವಹಿಸಿದ್ದ ಗಚ್ಚಿನ ಮಠದ ಶಿವಬಸವ ಸ್ವಾಮಿಗಳು ಆಶೀರ್ವಚನ ನೀಡಿ ಮಾತನಾಡಿ ಮಕ್ಕಳಿಗೆ ಆಸ್ತಿ ಗಳಿಸುವುದಕ್ಕಿಂತ, ಮಕ್ಕಳನ್ನೇ ಆಸ್ತಿಯನ್ನಾಗಿ ರೂಪಿಸಬೇಕು. ಇಂದಿನ ಹೇಳಿ ಜನಪರ ಕಾಳಜಿ ಹೊಂದಿರುವ ಲಕ್ಷ್ಮಣ ಸವದಿ ನಾಡಿನ ಅಪರೂಪದ ರಾಜಕಾರಣಿ ಮತಕ್ಷೇತ್ರಕ್ಕೆ ಅನೇಕ ಪ್ರೌಢಶಾಲೆಗಳನ್ನು, ವಸತಿ ಶಾಲೆಗಳನ್ನು, ಆಂಗ್ಲ ಮಾಧ್ಯಮ ಶಾಲೆಗಳನ್ನು, ಕೇಂದ್ರಿಯ ಮಹಾ ವಿದ್ಯಾಲಯ, ಪಶು ವೈದ್ಯಕೀಯ ಮಹಾವಿದ್ಯಾಲಯ, ಕೃಷಿ ಮಹಾವಿದ್ಯಾಲಯ, ಸೇರಿದಂತೆ ಹಲವು ಶಾಲಾ ಕಾಲೇಜುಗಳನ್ನು ಆರಂಭಿಸಿದ್ದಾರೆ. ಇದರಿಂದ ಬಡ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಪಡೆಯಲು ಸಹಕಾರಿಯಾಗಿದೆ. ಮುಂದಿನ ದಿನಗಳಲ್ಲಿ ತಾಲೂಕಿನಲ್ಲಿ ಇಂಜಿನಿಯರಿಂಗ್ ಮಹಾವಿದ್ಯಾಲಯವನ್ನು ಆರಂಭಿಸುವಂತೆ ಸಲಹೆ ನೀಡಿದರು.
ಯುವ ನಾಯಕ ಚಿದಾನಂದ ಸವದಿ ಸರ್ವರನ್ನು ಸ್ವಾಗತಿಸಿದರು. ಶರಣಯ್ಯ ಭಂಡಾರಿಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.
ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಆರ್. ಮುಂಜಿ, ಶ್ರೀಶೈಲ ನಾರಗೊಂಡ. ಅಶೋಕ ಯಲ್ಲಡಗಿ, ಆನಂದ ದೇಶಪಾಂಡೆ. ಶಿವಕುಮಾರ ಸವದಿ. ನ್ಯಾಯವಾದಿ ಸಿದ್ದಾರೂಢ ಸವದಿ. ಅಮೋಘ ಖೊಬ್ರಿ.
ಸುಮೀತ್ ಸವದಿ. ಶಶಿಕಾಂತ ಸವದಿ. ಅಕ್ಷಯ್ ಸವದಿ.
ದತ್ತಾ ವಾಸ್ಟರ್. ಮಲ್ಲು ಕುಲ್ಲೋಳಿ. ರಾಮನಗೌಡ ಪಾಟೀಲ. ಆಸೀಫಅಲಿ ಡೊಂಗರಗಾಂವ.
ಸೇರಿದಂತೆ ಹಲವು ಗಣ್ಯರು, ಶಿಕ್ಷಕರು, ಪೋಷಕರು ಮತ್ತು ಸಾವಿರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ರೌಡಿ ಶೀಟರ್ ರವಿಕುಮಾರ ಗುಂಡಾ ಕಾಯ್ದೆ ಅಡಿಯಲ್ಲಿ ಬಂಧನ



**ಕಲಬುರಗಿ,ಮೇ.25**-ನಗರದ ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ವ್ಯಾಪ್ತಿಯ ರೌಡಿಶೀಟರ್ ರವಿಕುಮಾರ ಅಲಿಯಾಸ್ ರವಿ, ಅಲಿಯಾಸ್ ರವ್ಯಾ ತಂದೆ ತುಕಾರಾಮ (37)ನನ್ನು ಗುಂಡಾ ಕಾಯ್ದೆ ಅಡಿಯಲ್ಲಿ ಬಂಧಿಸಿ ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿಡಲು ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.
ನಗರದ ಸಿ.ಜೆ.ಕಾಲೋನಿಯ ಹನುಮಾನ ನಗರ ನಿವಾಸಿಯಾದ ರೌಡಿಶೀಟರ್ ರವಿಕುಮಾರ ರೂಢಿಗತ ಅಪರಾಧಿಯಾಗಿದ್ದು, ಈತನ ಮೇಲೆ ಒಟ್ಟು 9 ಪ್ರಕರಗಳು ದಾಖಲಾಗಿವೆ. 2008 ರಿಂದ 2026ರವರೆಗೆ 18 ಪ್ರಕರಣಗಳು, ಭಾರತೀಯ ನ್ಯಾಯ ಸಂಹಿತೆ ಕಾಯ್ದೆ-2023ರ ಅಡಿಯಲ್ಲಿ 2 ಪ್ರಕರಣಗಳು, ಸಿಆರ್‌ಪಿಸಿ ಅಡಿಯಲ್ಲಿ 2 ಪ್ರಕರಣಗಳು, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಅಡಿಯಲ್ಲಿ 2 ಪ್ರಕರಣಗಳು ಸೇರಿ ಒಟ್ಟು 24 ಪ್ರಕರಣಗಳು ದಾಖಲಾಗಿದ್ದು, "ಎ"ರೌಡಿ ಎಂದು ಗುರುತಿಸಲಾಗಿದೆ.
ಈತನ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆ, ಕೊಲೆಗೆ ಯತ್ನ, ದರೋಡೆ, ಸುಲಿಗೆ, ಕಳ್ಳತನ, ಮಹಿಳೆಯರ ಮೇಲೆ ಹಲ್ಲೆ, ಜೀವ ಬೆದರಿಕೆಯಂತಹ ಘೋರ ಪ್ರಕರಣಗಳಲ್ಲಿ ಭಾಗಿಯಾಗಿದ್ದಾನೆ.
ಆರೋಪಿಯ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಆರೋಪಿಯನ್ನು ಗುಂಡಾ ಕಾಯ್ದೆ ಅಡಿಯಲ್ಲಿ ಬಂಧನ ಮಾಡುವುದು ಸೂಕ್ತ ಎಂದು ಸ್ಟೇಷನ್ ಬಜಾರ್ ಪೊಲೀಸ್ ಠಾಣೆ ಪಿಐ ಗುರು ಪಾಟೀಲ ಅವರು ವರದಿ ಸಲ್ಲಿಸಿದ ಹಿನ್ನೆಲೆಯಲ್ಲಿ ನಗರ ಪೊಲೀಸ್ ಆಯುಕ್ತರಾದ ಡಾ.ಶರಣಪ್ಪ ಎಸ್.ಡಿ.ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಆರೋಪಿಯನ್ನು ಗುಂಡಾ ಕಾಯ್ದೆಯಡಿ ಬಂಧಿಸಿ ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿಡಲು ಆದೇಶ ಹೊರಡಿಸಿದ್ದಾರೆ.

## ಅಂಗನವಾಡಿ ಕೇಂದ್ರಗಳಿಗೆ ಕಳಪೆ ಆಹಾರ; ಸಂಸ್ಥೆ ಪರವಾನಿಗೆ ರದ್ದುಪಡಿಸಲು ಆಗ್ರಹ

ಕಲಬುರಗಿ,ಮೇ.25- ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ವಿತರಿಸುವ ತಮಿಳುನಾಡು ಮೂಲದ ರಾಜರಾಜೇಶ್ವರಿ ಆಹಾರ ವಿತರಣೆ ಸಂಸ್ಥೆಯ ಪರವಾನಿಗೆ ರದ್ದು ಪಡಿಸುವಂತೆ ಆಗ್ರಹಿಸಿ ವೀರ ಕನ್ನಡಿಗರ ಸೇನೆ ಅಧ್ಯಕ್ಷ ಅಮೃತ ಸಿ.ಪಾಟೀಲ ಸಿರನೂರ ನೆತೃತ್ವದ ನಿಯೋಗ ಪ್ರಾದೇಶಿಕ ಆಯುಕ್ತರಿಗೆ ದೂರು ನೀಡಿ ಒತ್ತಾಯಿಸಿದ್ದಾರೆ.
ಕಲ್ಯಾಣ ಕರ್ನಾಟಕದ ಆರು ಜಿಲ್ಲೆಗಳ ಅಂಗನವಾಡಿ ಕೇಂದ್ರಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸುವ ಈ ಸಂಸ್ಥೆ ತನ್ನ ತಂಬಿಂಟದ ಉಂಡೆಗಳ ಪುಡಿ ಅತ್ಯಂತ ಕಳಪೆ ಮಟ್ಟದ್ದಾಗಿದ್ದು, ಮಕ್ಕಳು ಮತ್ತು ಗರ್ಭಿಣಿಯರು ಸೇವಿಸುವ ಈ ಪದಾರ್ಥ ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದೆ ಎಂದು ನಿಯೋಗ ತನ್ನ ದೂರಿನಲ್ಲಿ ಆರೋಪಿಸಿದೆ.

ಈ ಪದಾರ್ಥ ಸರಬರಾಜು ಸಂಬಂಧಿಸಿದ ನಕಲಿ ಯೋಜನಾ ವರದಿಯನ್ನು ಸೃಷ್ಠಿಸಿ ಸರ್ಕಾರದಿಂದ ಕೋಟ್ಯಾಂತರ ರೂ.ಗಳನ್ನು ಲೂಟಿ ಮಾಡಿರುವ ಈ ಪ್ರಕರಣದ ಕುರಿತು ಉನ್ನತ ಮಟ್ಟದ ತನಿಖೆ ಕೈಗೊಂಡು ತಕ್ಷಣವೇ ಸಂಸ್ಥೆಯ ಪರವಾನಿಗೆ ರದ್ದುಪಡಿಸಿ ತಪ್ಪಿತಸ್ಥರ ವಿರುದ್ದ ಕ್ರೀಮಿನಲ್ ಪ್ರಕರಣ ದಾಖಲಿಸುಂತೆ ಸೇನೆ ಆಗ್ರಹಿಸಿದೆ.



ಈ ಸಂದರ್ಭದಲ್ಲಿ ಸಂಘಟನೆಯ ಪ್ರಮುಖರಾದ ರವಿ ಒಂಟಿ, ಶಿವಾನಂದ ಚಿಕ್ಕಾಣಿ, ಅಣವೀರ ಬಿರಾದಾರ, ಗೋಪಾಲರಾವ ವಾಲಿಕಾರ, ಖಾಜಾ ಹುಸೇನ, ಯಲ್ಲಾಲಿಂಗ ಪೂಜಾರಿ, ರಾಜು ಸೇರಿದಂತೆ ಹಲವರಿದ್ದರು.

## ಜೂಜಾಟ:8 ಜನರ ಬಂಧನ


**ಕಲಬುರಗಿ,ಮೇ.25**-ವಿಶ್ವವಿದ್ಯಾಲಯ ಪೊಲೀಸ್ ಠಾಣೆ ವ್ಯಾಪ್ತಿಯ ಹಾಗರಗಾ ಗ್ರಾಮದಿಂದ ಭೂಪಾಲ ತೆಗನೂರ ಗ್ರಾಮದ ಕಡೆಗೆ ಹೋಗುವ ರಸ್ತೆಯ ಪಕ್ಕದಲ್ಲಿರುವ ಹಬೀಬಸಾಬ ಎಂಬುವವರ ಕಬ್ಬಿನ ಹೊಲದ ಶೆಡ್‌ರೂಮ್ ಎದುರುಗಡೆಯ ಖಾಲಿ ಜಾಗದಲ್ಲಿ ಜೂಜಾಟವಾಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ಸಿಸಿಬಿ ಘಟಕದ ಎಸಿಪಿ ಜೇಮ್ಸ್ ಮಿನೇಜಸ್, ಸಿಬ್ಬಂದಿಗಳಾದ ಯಲ್ಲಪ್ಪ, ಅಶೋಕ ಕಟಕೆ, ಶಿವಕುಮಾರ, ನಾಗರಾಜ, ಸನೀಲಕುಮಾರ ಅವರು ದಾಳಿ ನಡೆಸಿ 8 ಜನರನ್ನು ಬಂಧಿಸಿದ್ದಾರೆ.
ಅಶ್ಫಾಕ್ ಅಲಿ, ಫಿರ್ದೋಸ್, ಸೈಯದ್ ಖಾಜಾ ಪಾಶಾ, ಮಹ್ಮದ್ ಅಬ್ದುಲ್ ರಹೇಮಾನ್ ರಜಾ, ಅಲಿಮೋದ್ದಿನ್, ಅಬ್ದುಲ್ ರೌಫ್, ಮಹ್ಮದ್ ಜಮೀಲ್ ಖಾನ್ ಹಾಗೂ ಅಬ್ದುಲ್ ನದೀಮ್ ಎಂಬುವವರನ್ನು ಬಂಧಿಸಿ 11,940 ರೂ.ನಗದು ಜಪ್ತಿ ಮಾಡಿದ್ದಾರೆ. ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸ್ಮರಣೋತ್ಸವದಲ್ಲಿ ಬೆಲ್ದಾಳ ಸಿದ್ಧರಾಮ ಶರಣರ ಸ್ಮರಣೆಬೀದರ್ ಪರಿಚಯಿಸಿದ ಅಕ್ಕ ಅನ್ನಪೂರ್ಣತಾಯಿ




**ಬೀದರ್:** ಅಕ್ಕ ಅನ್ನಪೂರ್ಣತಾಯಿ ಬೀದರ್ ಅನ್ನು ಜಗತ್ತಿಗೆ ಪರಿಚಯಿಸಿದ್ದರು ಎಂದು ಕೌಠಾ(ಬಿ) ಬಸವಯೋಗಾಶ್ರಮದ ಸಿದ್ಧರಾಮ ಶರಣರು ಬೆಲ್ದಾಳೆ ಹೇಳಿದರು. ಇಲ್ಲಿಯ ಬಸವಗಿರಿಯಲ್ಲಿ ಬಸವೋತ್ಸವದಲ್ಲಿ ಶನಿವಾರ ನಡೆದ ಅಕ್ಕ ಅನ್ನಪೂರ್ಣತಾಯಿ ಅವರ ಸ್ಮರಣೋತ್ಸವದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.
ಬಸವಗಿರಿ, ವಚನ ವಿಜಯೋತ್ಸವ, ಪ್ರಭುದೇವ ಸ್ವಾಮೀಜಿ ಅಕ್ಕ ಅನ್ನಪೂರ್ಣತಾಯಿ ಅವರ ಕೊಡುಗೆ ಎಂದು ಬಣ್ಣಿಸಿದರು. ಅಕ್ಕ ಬಸವ ತತ್ವದ ತುತ್ತು ಉಣ್ಣಿಸಿದ್ದರು. ಅಕ್ಕನವರ ಮಾತುಗಳಿಂದ ವಚನ ತತ್ವಾನುಭವ ಗ್ರಂಥ ಹುಟ್ಟಿಕೊಂಡಿತು. ಬಸವ ತತ್ವಕ್ಕೆ ಈಗ ವಿಘ್ನಗಳು ಅಧಿಕ ಇವೆ ಎಂದು ತಿಳಿಸಿದರು.ಅಕ್ಕನವರ ಧ್ವನಿಯನ್ನು ಈಗ ಪ್ರಭುದೇವರಲ್ಲಿ ಕೇಳಬಹುದು. ಅಕ್ಕನ ಸ್ಮರಣೋತ್ಸವವನ್ನು ಬಸವೋತ್ಸವ ಆಗಿ ಆಚರಿಸುತ್ತಿರುವುದು ಅರ್ಥಪೂರ್ಣ ಎಂದರು.
ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಸುರೇಶ ಚನಶೆಟ್ಟಿ ಮಾತನಾಡಿ, ಅಕ್ಕನವರು ಒಂದು ಚೈತನ್ಯ ಶಕ್ತಿ. ಅವರ ಸಂಪರ್ಕಕ್ಕೆ ಬಂದವರಲ್ಲಿ ಮಿಂಚಿನ ಸಂಚಾರವಾಗುತ್ತಿತ್ತು. ಬಸವಣ್ಣನವರ ತತ್ವ ಸಾರಿದ್ದ ಅವರು ಸೂರ್ಯ- ಚಂದ್ರ ಇದ್ದಂತೆ
ಜಾಗತಿಕ ಲಿಂಗಾಯತ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಬಸವರಾಜ ಧನ್ನೂರ ಮಾತನಾಡಿ, ಅಕ್ಕ ಅಪಾರ ಜ್ಞಾನಿ. ಅರಿವಿನ ಆಗರ. ದಿನದ 24 ಗಂಟೆ ದುಡಿಯುತ್ತಿದ್ದರು. ಅವರ ಕಾರ್ಯಕ್ರಮ ನೋಡಿ ಜನ ಮೂಗಿನ ಮೇಲೆ ಬೆರಳು ಇಟ್ಟುಕೊಳ್ಳುತ್ತಿದ್ದರು. ಅವರು ಬೀದರ್‌ನಲ್ಲಿ ಬಸವ ತತ್ವದ ಮಹಾ ಮನೆ ಬಹಳ ವ್ಯವಸ್ಥಿತವಾಗಿ ಕಟ್ಟಿದ್ದರು ಎಂದು ಸ್ಮರಿಸಿದರು.
ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ರೂಗನ್ ಮಾತನಾಡಿ, ಅಕ್ಕನವರ ಮಾತುಗಳು ತಾಯಿಯ ಮಾತಿನಂತೆ ಇರುತ್ತಿದ್ದವು. ಅವರಂಥ ಗುರು ಸಿಕ್ಕದ್ದು ನಮ್ಮ ಪುಣ್ಯ. ಅಕ್ಕ ಹೋದ ಮೇಲೆ ಬೀದರ್ ಭಣ ಭಣ ಎನಿಸುತ್ತಿದೆ ಎಂದು ಹೇಳಿದರು.ಶಾಂತಾ ಜಯರಾಜ ಖಂಡ್ರೆ ಮಾತನಾಡಿ, ಅಕ್ಕ ಎಲ್ಲರಿಗೂ ಬಸವಣ್ಣವರನ್ನು ತೋರಿಸಿಕೊಟ್ಟಿದ್ದರು. ಭಕ್ತರಿಗಾಗಿ ಬದುಕು ಮುಡುಪಾಗಿಟ್ಟಿದ್ದರು ಎಂದು ತಿಳಿಸಿದರು.ನೇತೃತ್ವ ವಹಿಸಿದ್ದ ಪ್ರಭುದೇವ ಸ್ವಾಮೀಜಿ ಮಾತನಾಡಿ, ಅಕ್ಕ ಅವರದ್ದು ಮೇರು ವ್ಯಕ್ತಿತ್ವ. ತಾಯಿ ಇಲ್ಲದವರಿಗೆ ತಾಯಿಯಾಗಿದ್ದರು. ನೊಂದವರಿಗೆ, ಬೆಂದವರಿಗೆ ತಂದೆ-ತಾಯಿಯಾಗಿ ಪ್ರೀತಿ ಹಂಚಿದ್ದರು ಎಂದು ಹೇಳಿದರು.ಎಲ್ಲ ಭಾಷೆಯಲ್ಲಿ ಪ್ರವಚನ ಮಾಡಲು 100 ವರ್ಷ ಆಯಸ್ಸು ತೆಗೆದುಕೊಂಡು ಮತ್ತೆ ಬರುತ್ತೇನೆ ಎಂದು ಹೇಳುತ್ತಿದ್ದರು. ಮುಂದಿನ ವರ್ಷದವರೆಗೆ ಅಕ್ಕನವರ ಎಲ್ಲ ಗ್ರಂಥಗಳನ್ನು ಹೊರ ತರೋಣ ಎಂದರು.
ಅಕ್ಕ ಅನ್ನಪೂರ್ಣತಾಯಿ ಅವರ ಕುರಿತ ರೂಪಕ ಎಲ್ಲರ ಗಮನ ಸೆಳೆಯಿತು.
ಬಸವ ರಾಷ್ಟ್ರೀಯ ಪುರಸ್ಕಾರಕ್ಕೆ ಭಾಜನರಾದ ಬೆಲ್ದಾಳ ಸಿದ್ಧರಾಮ ಶರಣರು ಹಾಗೂ ಬಸವ ಜಯಂತಿಯನ್ನು ಯಶಸ್ವಿಯಾಗಿ ಸಂಘಟಿಸಿದ 2026ನೇ ಸಾಲಿನ ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಡಾ. ರಜನೀಶ್ ವಾಲಿ ಅವರನ್ನು ಸನ್ಮಾನಿಸಲಾಯಿತು.ಬಸವಕಲ್ಯಾಣದ ಬಸವ ಮಹಾ ಮನೆಯ ಜಗದ್ಗುರು ಸಿದ್ಧರಾಮ ಸ್ವಾಮೀಜಿ, ಕೊಪ್ಪಳದ ಯಳವಂತ ಶರಣರು ಸಾನಿಧ್ಯ ವಹಿಸಿದ್ದರು. ಭಾರತೀಯ ಬಸವ ಬಳಗದ ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ ಬೆಲ್ದಾಳೆ, ಬಸವ ಜಯಂತಿ ಉತ್ಸವ ಸಮಿತಿಯ ಅಧ್ಯಕ್ಷ ಡಾ. ರಜನೀಶ್ ವಾಲಿ, ರೋಟರಿ ಕಲ್ಯಾಣ ಝೋನ್ ಸಹಾಯಕ ಗವರ್ನರ್ ಹಾವಶೆಟ್ಟಿ ಪಾಟೀಲ, ಕನ್ನಡಾಂಬೆ ಗೆಳೆಯರ ಬಳಗದ ಅಧ್ಯಕ್ಷ ವಿರೂಪಾಕ್ಷ ಗಾದಗಿ, ಗೋರ್ಟಾ(ಬಿ)ದ ಸೋಮನಾಥಪ್ಪ ರಾಜೇಶ್ವರೆ, ಕೊಪ್ಪಳದ ಅರ್ಚನಾ ಗವೀಶ್ ಸಸಿಮಠ, ಹುಬ್ಬಳ್ಳಿಯ ಪ್ರಭಾ ಏರೆಸೀಮೆ, ಸಾಹಿತಿ ರಮೇಶ ಮಠಪತಿ ಇದ್ದರು.ಸಂಧ್ಯಾರಾಣಿ ಮುತ್ತಂಗೆ ನಿರೂಪಿಸಿದರು. ಡಾ. ಸಂತೋಷ್ ಹಂಗರಗಿ ಸ್ವಾಗತಿಸಿದರು.

## ಕ್ರಿಕೆಟ್ ಬೆಟ್ಟಿಂಗ್:ಓರ್ವನ ಬಂಧನ



**ಕಲಬುರಗಿ,ಮೇ.25**-ನಗರದ ರಾಜಾಪುರದ ಶಹಾಬಾದ ರಿಂಗ್ ರೋಡ್ ಹತ್ತಿರದ ಟೀಸ್ಟಾಲ್ ಬಳಿ ಇರುವ ಸಾರ್ವಜನಿಕ ರಸ್ತೆಯ ಮೇಲೆ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ಆಡಲಾಗುತ್ತಿದೆ ಎಂಬ ಮಾಹಿತಿ ಮೇಲೆ ವಿಶ್ವವಿದ್ಯಾಲಯ ಪೊಲೀಸ್ ಠಾಣೆ ಪಿಐ ಚಂದ್ರಶೇಕರ್, ಸಿಬ್ಬಂದಿಗಳಾದ ಈರಣ್ಣಾ, ಜೈಭೀಮ, ವಿಠೋಬಾ ಅವರು ದಾಳಿ ನಡೆಸಿ ಓರ್ವನನ್ನು ಬಂಧಿಸಿದ್ದಾರೆ.
ಸೇಡಂ ರಸ್ತೆಯ ಆರ್‌ಟಿಒ ಕಚೇರಿ ಹತ್ತಿರದ ಆಂಜನೇಯ ನಗರ ಕಾಲೋನಿಯ ಮಲ್ಲಿನಾಥ ತಂದೆ ಲಕ್ಷ್ಮಣ ಜಮಾದಾರ (32) ಎಂಬಾತನನ್ನು ಬಂಧಿಸಿ 5 ಸಾವಿರ ನಗದು, ತಲಾ 5 ಸಾವಿರ ರೂಪಾಯಿ ಮೌಲ್ಯದ 2 ಮೊಬೈಲ್ ಜಪ್ತಿ ಮಾಡಿದ್ದಾರೆ. ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಗೋಲಗೇರದಲ್ಲಿ ಖುದ್ದಾಮುಲ್ ಅಹ್ಮದಿಯಾ ಜಿಲ್ಲಾಮಟ್ಟದ ಸಮಾವೇಶ
# ಯುವಕರ ಸುಧಾರಣೆಯಾಗದೇ ಸಮುದಾಯದ ಸುಧಾರಣೆ ಸಾಧ್ಯವಿಲ್ಲ

**ಸಿಂದಗಿ, ಮೇ.25–** ಜಗತ್ತು ಅನೈತಿಕತೆಯಲ್ಲಿ ಮುಳುಗಿ ಅದಃಪತನದಡಿ ಸಾಗುತ್ತಿರುವಾಗ, ಅಧ್ಯಾತ್ಮೀಕತೆಯಿಂದ ದೂರಗೊಂಡು ಕತ್ತಲೆ ಆವರಿಸಿದಾಗಲೆಲ್ಲ ಸರ್ವಶಕ್ತನಾದ ದೇವನು ಮನುಷ್ಯನ ಮಾರ್ಗದರ್ಶನಕ್ಕಾಗಿ ತನ್ನ ಅವತಾರಗಳನ್ನು ಕಳುಹಿಸಿ ಕೋಡುವುದಾಗಿ ಪವಿತ್ರ ಗ್ರಂಥಗಳಾದ ಭಗವತ ಗೀತೆ, ಬೈಬಲ್ ಮತ್ತು ಕುರ್ ಆನ್ ನಲ್ಲಿ ವಾಗ್ದಾನ ಮಾಡಿದ್ದಾನೆ ಎಂದು ಬಿಜಾಪುರ ಮೌಲ್ವಿ ಮಕ್ಬುಲ್ ಅಹ್ಮದ ಅವರು ಹೇಳಿದರು.
ತಾಲೂಕಿನ ಗೋಲಗೇರಾ ಗ್ರಾಮದ ಅಹ್ಮದಿಯಾ ಮುಸ್ಲೀಮ ತಾಲೀಮ್ ಉಲ್ ಇಸ್ಲಾಂ ಸೆಂಟರ್ ನಲ್ಲಿ ಮೇ.24 ರವಿವಾರ ಆಯೋಜಿಸಿದ್ದ (ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್ಫಾಲುಲ್ ಅಹ್ಮದಿಯಾ) ಕಲಬುರಗಿ ಮತ್ತು ವಿಜಯಪುರ ಜಿಲ್ಲೆಯ ಯುವಕರ ಮತ್ತು ಮಕ್ಕಳ ವಾರ್ಷಿಕ ಜಿಲ್ಲಾ ಮಟ್ಟದ ಸಮಾವೇಶದಲ್ಲಿ ಉಪನ್ಯಾಸ ನೀಡಿದ ಅವರು, ಪ್ರವಾದಿ ಮಹ್ಮದ್ ಪೈಗಂಬರ ಅವರು ಅಂತ್ಯ ಕಾಲದ ಕುರಿತು ಶುಭವಾರ್ತೆಯನ್ನು ಪ್ರಕಟಿಸಿದರು, ನನ್ನ ನಂತರ ಬರಲಿರುವ ಮಹಾಪುರುಷನ ಹೆಸರು ಅಹ್ಮದ ಆಗಿರುವುದು, ಅದರಂತೆ ಅಲ್ಲಾಹನ ಆದೇಶದಂತೆ ಪಂಜಾಬಿನ ಖಾದಿಯಾನ್ ನಲ್ಲಿ ಅವತರಿಸಿದ ಹಜರತ ಗುಲಾಂ ಅಹ್ಮದ ಖಾದಿಯಾನಿ ಅವರು, ತಾವು ಅಂತ್ಯ ಯುಗದ ವಾಗ್ದತ್ತ ಮಸಿಹ ಮತ್ತು ಮಹದಿ ಆಗಿರುವುದಾಗಿ ಘೋಷಿಸಿದರು ಮತ್ತು ಅವರು, 1889ರಲ್ಲಿ ಅಹ್ಮದಿಯಾ ಮುಸ್ಲೀಮ ಸಂಘಟನೆಗೆ ಭೂನಾದಿ ಹಾಕಿದರು. ಈ ಸಂಘಟನೆ ವಿಶ್ವದಲ್ಲಿ ಶಾಂತಿಯ ನೈಜ ಇಸ್ಲಾಮಿನ ಸಂದೇಶವನ್ನು ಮರು ಸ್ಥಾಪಿಸಲು ಶ್ರಮಿಸುತ್ತಿದೆ, ಶಿಕ್ಷಣ, ಆರೋಗ್ಯ ಮತ್ತು ಮಾನವೀಯ ಸೇವೆಯಲ್ಲಿ ನಿರತವಾಗಿದೆ ಎಂದು ಅವರು ಹೇಳಿದರು.

ಬೆಳಗಿನ ಜಾವದ ವಿಶೇಷ ಪ್ರಾರ್ಥನೆ ತಾಜುದ ನಮಾಜ ಮತ್ತು ಪವಿತ್ರ ಕುರ್‌ಆನ್ ಪಠಣದೊಂದಿಗೆ ಪ್ರಾರಂಭಾದ ಈ ಸಮಾವೇಶಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ ಕೇಂದ್ರ ಸಂಘಟನೆಯ ಪ್ರತಿನಿಧಿ ಹಿರಿಯ ನ್ಯಾಯವಾದಿ ಲಿಯಾಖತ್ ಫರೀದ್ ಉಸ್ತಾದ ಅವರನ್ನು ಸಂಘಟನೆಯ ಶಿಷ್ಟಚಾರದಂತೆ ಗೌರವ ಆದಾರಗಳೊಂದಿಗೆ ಭವ್ಯವಾಗಿ ಸ್ವಾಗತಿಸಲಾಯಿತು, ಸಂಘಟನೆಯ ಧ್ವಜಾರೋಹಣವನ್ನು ನೆರವೇರಿಸುವ ಮೂಲಕ ಅವರು, ಸಮಾವೇಶಕ್ಕೆ ವಿದ್ಯುಕ್ತವಾಗಿ ಚಾಲನೆ ನೀಡಿದರು.

ರಾಯಚೂರು ಮೌಲ್ವಿ ಸಮೀರ ಅಹ್ಮದ ಅವರು, ಪ್ರವಾದಿ ಮೊಹ್ಮದ ಪೈಗಂಬರ ಅವರ ನಡೆನುಡಿ ಮಾನವೀಯ ಸಂದೇಶದ ಕರುತು ಉಪನ್ಯಾಸ ನೀಡಿದರು. ಗುಲಬರ್ಗಾ ವಿಶ್ವವಿದ್ಯಾಲಯದ ನಿವೃತ್ತ ಕುಲಪತಿ ಪ್ರೊ.ಅಬ್ದುಲ ರಬ್ ಉಸ್ತಾದ ಅವರು, ಯುವರಕ ಸುಧಾರಣೆ ಇಲ್ಲದೇ ಸಮಾಜದ ಸುಧಾರಣೆ ಅಸಾಧ್ಯ ಎಂಬ ವಿಷಯದ ಮೇಲೆ ಉಪನ್ಯಾನ ನೀಡಿದರು.



ಯಾದಗಿರ ಜಿಲ್ಲಾ ಅಮೀರ ನಹೀಮ ಅಹ್ಮದ ಸಗರಿ ಅವರು, ಪ್ರವಾದ ಮೊಹ್ಮದ ಪೈಗಂಬರ ಅವರ ಭವಿಷ್ಯವಾಣಿ ಮತ್ತು ವಾಗ್ದತ್ತ ಮಸೀಹ ಮಹದಿ ಅವರ ಅವತಾರದ ಕುರಿತು ಮಾತನಾಡಿದರು. ಕಲಬುರಗಿ ಅಹ್ಮದಿಯಾ ಮಿಷನರಿ ಮೌಲ್ವಿ ಜುನೈದ್ ಅಹ್ಮದ ಖಾನ್ ಅವರು, ಅಲ್ಲಾಹ ಅನುಗ್ರಾಹ ಪ್ರಾಪ್ತಿಯಗಾಗಿ ಪ್ರಾರ್ಥನೆಯ ಮಾರ್ಗದ ಭಕ್ತಿಯಿಂದ ಆತನನ್ನು ಸಂದಿಸುವ ವಿಷಯದ ಕುರಿತು ಉಪನ್ಯಾಸ ನೀಡಿದರು.

ಪವಿತ್ರ ಕುರ್‌ಆನ್ ಪಠಣ, ನಜಂ ಭಕ್ತಿಗೀತೆ, ಕ್ವಿಜ್, ಕಬಡ್ಡಿ, ಓಟ, ರಿಲೆ, ಹಗ್ಗಜಗ್ಗಾಟ, ಮಿಜಿಕಲ್ ಚೇರ್ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದ ಯುವಕರಿಗೆ ಮತ್ತು ಮಕ್ಕಳಿಗೆ ಬಹುಮಾನಗಳನ್ನು ಗಣ್ಯಮಾನ್ಯರಿಂದ ವಿತರಿಸಲಾಯಿತು.
ಕಾರ್ಯಕ್ರಮದಲ್ಲಿ ಗದಗ ಜಿಲ್ಲೆಯ ಮೌಲ್ವಿ ನಿಜಾಮುದ್ದೀನ ಬೊಧನ, ಮೌಲ್ವಿ ಸಾಬಿರ್ ಮುಲ್ಲಾ ಸಂಕನಾಳ, ಗೊಲಗೇರ ಮೌಲ್ವಿ ಫಜಲ್ ಉಲ್ ರಹಮಾನ್, ಮೌಲ್ವಿ ಸಗಿರ್ ಅಹ್ಮದ ಬಿಜಾಪೂರ, ಮೌಲ್ವಿ ಖಾಜಿ ಉಸ್ಮಾನ ಪಾಷಾ ಸೋಲಾಪೂರ, ಮೌಲ್ವಿ ರಫೀಕ್ ಉಲ್ ಜಮಾ ಕರ್ನಾಟಕ ಮತ್ತು ಮಹಾರಾಷ್ಟ್ರ ಪ್ರಮುಖರು, ಬಿಜಾಪುರ ಮಾಜಿ ಅಮೀರ ಜನಾಬ ಹುಸೇನ್ ಪೀರ ಸಾಹೇಬ, ರಾಯಚೂರ ಜಿಲ್ಲಾ ಅಮೀರ ಸಾದತ ಅಹ್ಮದ, ಮೌಲ್ವಿ ಮಕಬೂಲ ಅಹ್ಮದ ವಿಜಯಪುರ, ಹಷ್ಮಮತುಲ್ಲಾ ಹೌದೋಡಿ ಕಲಬುರಗಿ, ವಸೀಮ್ ಅಹ್ಮದ ನೂರ, ತಾರೀಖ ಅಹ್ಮದ ಮುಸ್ತಕೀಮ ಸೇರಿದಂತೆ ಗಣ್ಯಮಾನ್ಯರು ವೇದಿಕೆಯಲ್ಲಿದ್ದರು.

ಖುದ್ದಾಮುಲ್ ಅಹ್ಮದಿಯಾ ಕೇಂದ್ರ ಸಂಘಟನೆಯ ಅಧ್ಯಕ್ಷರು, ಆನ್ ಲೈನ್ ಮೂಲಕ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿ, ಖಲಿಫಾರ ಆಜ್ಞಾಪಾಲನೆ ಮಾಡುವ ಮೂಲಕ, ಅಹ್ಮದಿಯ ಸಂಘಟನೆಯ ಶಾಂತಿಪ್ರೀಯ ನೈಜ ಇಸ್ಲಾಮೀನ ಸಂದೇಶವನ್ನು ತಮ್ಮೆಲ್ಲರ ನಡೆನುಡಿಯಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ಮತ್ತು ವಿಜಯಪುರ ಜಿಲ್ಲೆಯ ಅಮಿರ್ ಅಧ್ಯಕ್ಷ ಹಿರಿಯ ನ್ಯಾಯವಾದಿ ಲಿಯಾಖತ್ ಫರೀದ್ ಉಸ್ತಾದ ಅವರು, ಮಾತನಾಡಿ ಇಂತಹ ಕಾರ್ಯಕ್ರಮಗಳನ್ನು ಸಂಘಟಿಸಲು ತಮ್ಮೆಲ್ಲರ ಸಹಕಾರದಿಂದ ಸಾಧ್ಯವಾಗಿದೆ ಈ ಕೇಂದ್ರದಲ್ಲಿ ನಿರಂತರ ನೈಜ ಇಸ್ಲಾಮಿನ ಸೇವೆ ಮಾಡುವ ಸೇವಕರ ಅಗತ್ಯವಿದೆ ಎಂದರು. ತಾರೀಕ ಅಹ್ಮದ ಮುಸ್ತಾಕೀಮ ಅವರು, ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟರು, ಮೌನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

# ಶಾಂತಿ, ಸದ್ಭಾವನೆಯ ಪುನಸ್ಥಾಪನೆಯಲ್ಲಿ ಮಾಧ್ಯಮದ ಪಾತ್ರ : ಪತ್ರಕರ್ತರಿಂದ ಮಂಥನ

**ಬೀದರ್,ಮೇ.25–**ದೇವಭೂಮಿ ಹಿಮಾಚಲ ಪ್ರದೇಶದ ಧೌಲಾಧರ್ ಪರ್ವತ ಶ್ರೇಣಿಯ ತಪ್ಪಲಿನಲ್ಲಿ ಕುಳಿತು ಇಂದು ಮಾಧ್ಯಮ ತಜ್ಞರು ವಿಶ್ವದಲ್ಲಿ ಶಾಂತಿ ಮತ್ತು ಸದ್ಭಾವನೆಯ ಸ್ಥಾಪನೆಯ ಕುರಿತು ಚಿಂತನೆ
ನಡೆಸಿದರು.
ವಿಶ್ವದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಪುನಸ್ಥಾಪಿಸಲು ಎಲ್ಲರೂ ಒಕ್ಕೊರಲಿನಿಂದ ಸಂಕಲ್ಪ ಮಾಡಿದರು. ಈ ಸಂದರ್ಭವು ಪ್ರಜಾಪಿತ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವವಿದ್ಯಾಲಯದ ಮೀಡಿಯಾ ವಿಂಗ್ ಆಯೋಜಿಸಿದ್ದ ಮಾಧ್ಯಮ ಸೆಮಿನಾರ್ ಆಗಿತ್ತು. ಇದರಲ್ಲಿ ದೇಶದಾದ್ಯಂತ ಬಂದಿದ್ದ ಬ್ರಹ್ಮಾಕುಮಾರೀಸ್ ಮೀಡಿಯಾ ವಿಂಗ್ ಸದಸ್ಯರೊಂದಿಗೆ ಕಾಂಗ್ರಾದ ಪತ್ರಕರ್ತರು ಭಾಗವಹಿಸಿದ್ದರು.
ಮೌಂಟ್ ಅಬು ರಾಜಸ್ಥಾನದಿಂದ ಬಂದಿದ್ದ ಬ್ರಹ್ಮಾಕುಮಾರೀಸ್ ಮೀಡಿಯಾ ವಿಂಗ್‌ನ ರಾಷ್ಟ್ರೀಯ ಸಂಯೋಜಕ ಬ್ರಹ್ಮಾಕುಮಾರ್ ಡಾ.ಶಂತನು ಭಾಯಿ ಅವರು ಮಾಧ್ಯಮ ಸೆಮಿನಾರ್‌ನ ಪೀಠಿಕೆಯನ್ನು ಮಂಡಿಸಿದರು. ಅವರು ಮಾತನಾಡಿ, “ಬ್ರಹ್ಮಾಕುಮಾರೀಸ್ ಮಹಿಳೆಯರ ನೇತೃತ್ವದಲ್ಲಿ ನಡೆಯುತ್ತಿರುವ ವಿಶ್ವದ ಏಕೈಕ ಸಂಸ್ಥೆಯಾಗಿದೆ. ಜಗತ್ತಿನಲ್ಲಿ ದುಃಖ ಮತ್ತು ಅಶಾಂತಿ ಹೆಚ್ಚಾಗಲು ಮಾನವೀಯ ಮೌಲ್ಯಗಳ ಕುಸಿತವೇ ಏಕೈಕ ಕಾರಣವಾಗಿದೆ. ಇಂತಹ ಸಮಯದಲ್ಲಿ ಈ ಮಾಧ್ಯಮ ಸೆಮಿನಾರ್ ಅತ್ಯಂತ ಸಾರ್ಥಕವಾಗಿದೆ. ದೇಶ ಮತ್ತು ಸಮಾಜವನ್ನು ಜೊತೆಗೂಡಿಸಿ ಮುನ್ನಡೆಸುವ ಶಕ್ತಿ ಮಾಧ್ಯಮಕ್ಕಿದೆ. ಮಾಧ್ಯಮವು ಪ್ರಜಾಪ್ರಭುತ್ವದ
ನಾಲ್ಕನೇ ಸ್ತಂಭವಾಗಿದೆ” ಎಂದರು.
ಇಂದೋರ್‌ನಿಂದ ಆಗಮಿಸಿದ್ದ ಕುಶಾಭೌ ಠಾಕ್ರೆ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಶ್ವವಿದ್ಯಾಲಯದ (ರಾಯ್‌ಪುರ) ಮಾಜಿ ಕುಲಪತಿ ಡಾ. ಪ್ರೊ. ಮಾನ್‌ಸಿಂಗ್ ಪರ್ಮಾರ್ ಅವರು ಮುಖ್ಯ ಭಾಷಣಕಾರರಾಗಿ ಮಾತನಾಡಿ, “ಮಾಧ್ಯಮವು ಕೇವಲ ಮಾಹಿತಿಯನ್ನು ನೀಡುವ ಕೆಲಸ ಮಾಡುವುದಿಲ್ಲ, ಬದಲಿಗೆ ಒಂದು ದೃಷ್ಟಿಕೋನವನ್ನು ನೀಡುತ್ತದೆ. ಶಾಂತಿ ಸ್ಥಾಪನೆಯಲ್ಲಿ ಮಾಧ್ಯಮವು ಪ್ರಮುಖ ಪಾತ್ರ ವಹಿಸಬಲ್ಲದು” ಎಂದು ಹೇಳಿದರು.
ಮುಖ್ಯ ಅತಿಥಿಯಾಗಿ ಮಾತನಾಡಿದ ದಾರೋನ ಪೊಲೀಸ್ ತರಬೇತಿ ಕೇಂದ್ರದ ಪ್ರಾಂಶುಪಾಲರು ಹಾಗೂ ಡಿಐಜಿ ಖುಷಾಲ್ ಶರ್ಮಾ ಅವರು, “ಇಂತಹ ಆಧ್ಯಾತ್ಮಿಕ ಸ್ಥಳಕ್ಕೆ ಬರುವ ಅವಕಾಶ ಸಿಗುವುದು ಸೌಭಾಗ್ಯದ ಸಂಗತಿ. ಪೊಲೀಸ್ ಅಧಿಕಾರಿಯಾಗಿ ಪತ್ರಕರ್ತರೊಂದಿಗೆ ನನ್ನ ಸಂಬಂಧ ಯಾವಾಗಲೂ ಸಕಾರಾತ್ಮಕವಾಗಿದೆ. ನಾನು ಎರಡು ಬಾರಿ ಬ್ರಹ್ಮಾಕುಮಾರೀನ ಪ್ರಧಾನಕಚೇರಿಗೂ ಹೋಗಿದ್ದೇನೆ. ಕಾಲೇಜು ದಿನಗಳಿಂದಲೇ ಬ್ರಹ್ಮಾಕುಮಾರೀನ್‌ನ ಕಾರ್ಯಗಳ ಬಗ್ಗೆ ಕೇಳುತ್ತಿದ್ದೇನೆ. ಇಂದು ನಾವು ಅಶಾಂತಿಯ ಬಿರುಗಾಳಿಯ ಮಧ್ಯೆ ಸಾಗುತ್ತಿದ್ದೇವೆ, ಇದನ್ನು ದೂರ ಮಾಡುವಲ್ಲಿ ಪತ್ರಿಕೋದ್ಯಮವು ಪ್ರಮುಖ ಪಾತ್ರ ವಹಿಸುತ್ತದೆ.

ಪತ್ರಿಕೋದ್ಯಮದ ಮುಂದೆ ತನ್ನದೇ ಆದ ಸವಾಲುಗಳಿವೆ. ಪತ್ರಕರ್ತರಲ್ಲಿ ಆಧ್ಯಾತ್ಮಿಕತೆ ಮತ್ತು ಸಕಾರಾತ್ಮಕತೆಯನ್ನು ಹೆಚ್ಚಿಸುವ ಕೆಲಸವನ್ನು ಮಾಡುತ್ತಿರುವ ಬ್ರಹ್ಮಾಕುಮಾರೀನ ಮೀಡಿಯಾ ವಿಂಗ್‌ನ ಪ್ರಯತ್ನ ನಿಜಕ್ಕೂ ಶ್ಲಾಘನೀಯ” ಎಂದರು.
ವಿಶಿಷ್ಟ ಅತಿಥಿಯಾಗಿ ಡೆಹ್ರಾಡೂನ್‌ನಿಂದ ಆಗಮಿಸಿದ್ದ ‘ಶ್ರೀಮತ್ ಎಕ್ಸ್‌ಪ್ರೆಸ್’ ಮುಖ್ಯ ಸಂಪಾದಕ ಡಾ. ಡಿ. ಡಿ. ಮಿತ್ತಲ್ ಮಾತನಾಡಿ, “ನಮ್ಮ ಭಾವನೆಯಲ್ಲಿ ಸದ್ಭಾವನೆ, ಶಾಂತಿ ಮತ್ತು ಶುಭ ಹಾರೈಕೆಗಳು ಮೂಡಿದಾಗ, ನಾವು ಸಕಾರಾತ್ಮಕ ಪತ್ರಿಕೋದ್ಯಮವನ್ನು ಮಾಡಲು ಪ್ರಾರಂಭಿಸುತ್ತೇವೆ. ವದಂತಿಗಳಿಂದ ದೂರವಿರಿ, ಸತ್ಯಾಸತ್ಯತೆಯನ್ನು ಪರಿಶೀಲಿಸಿ ಮಾಧ್ಯಮದಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿ ಇರಬೇಕು” ಎಂದು
ಹೇಳಿದರು.
ರಾಯ್‌ಪುರದಿಂದ ಬಂದಿದ್ದ ‘ಭಾರತ್ ಎಕ್ಸ್‌ಪ್ರೆಸ್’ ಚಾನೆಲ್‌ನ ಸ್ಥಳೀಯ ಸಂಪಾದಕಿ ಪ್ರಿಯಾಂಕಾ ಕೌಶಲ್ ಮಾತನಾಡಿ, “ಸಮಾಜವು ನಮ್ಮನ್ನು ನಂಬಬೇಕಾದರೆ, ನಾವು ನಮ್ಮ ನಡವಳಿಕೆಯನ್ನು ಅಷ್ಟೇ ಪರಿಶುದ್ಧವಾಗಿ ಮಾಡಿಕೊಳ್ಳಬೇಕು” ಎಂದರು.



‘ಯೂನಿಯನ್ ಆಫ್ ಜರ್ನಲಿಸ್ಟ್’ ಪಾಲಂಪುರ್ ಅಧ್ಯಕ್ಷ ಸಂಜೀವ್ ಬಾಗ್ಲಾ ಮಾತನಾಡಿ, “ಆಧ್ಯಾತ್ಮಿಕತೆಗೆ ಸಂಬಂಧಿಸಿದ ಬ್ರಹ್ಮಾಕುಮಾರೀಸ್ ಸಹೋದರಿಯರು ನಮ್ಮನ್ನು ಆಹ್ವಾನಿಸಿದ್ದು ನನಗೆ ತುಂಬಾ ಸಂತೋಷ ತಂದಿದೆ. ನಾವು ನಕಾರಾತ್ಮಕ ಮತ್ತು ಸಕಾರಾತ್ಮಕ ಎರಡೂ ರೀತಿಯ ಸುದ್ದಿಗಳನ್ನು ಬರೆಯಬೇಕಾಗುತ್ತದೆ. ನಾವು ಸುದ್ದಿಯನ್ನಂತೂ ನೀಡುತ್ತಿದ್ದೇವೆ, ಆದರೆ ಅದರ ಮುಂದಿನ ಬೆಳವಣಿಗೆಯನ್ನು ಗಮನಿಸುತ್ತಿಲ್ಲ, ಇದರಿಂದಾಗಿ ಸುದ್ದಿಯ ಒಂದು ಪಾರ್ಶ್ವ ಮಾತ್ರ ಜನರ ಮುಂದೆ ಬರುತ್ತಿದೆ” ಎಂದು ಅಭಿಪ್ರಾಯಪಟ್ಟರು.
‘ಛತ್ತೀಸ್‌ಗಢ ಬಂಧು’ (ರಾಯ್‌ಪುರ) ಸಂಪಾದಕ ಮಧುಕರ್ ದ್ವಿವೇದಿ ಮಾತನಾಡಿ, “ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಪತ್ರಕರ್ತರ ಪಾತ್ರ ತುಂಬಾ ದೊಡ್ಡದಾಗಿದೆ. ಜಿಲ್ಲಾ ಮಟ್ಟದ ಪತ್ರಕರ್ತರು ಭಾರತೀಯ ಪತ್ರಿಕೋದ್ಯಮದ ಆತ್ಮವಿದ್ದಂತೆ. ನಾವು ನಿಷ್ಪಕ್ಷಪಾತ, ನಿರ್ಭೀತ ಮತ್ತು ಧೈರ್ಯಶಾಲಿಗಳಾಗಿರಬೇಕು ಎಂದು ಸಾರ್ವಜನಿಕರು ನಮ್ಮಿಂದ ಅಪಾರ ನಿರೀಕ್ಷೆ ಹೊಂದಿದ್ದಾರೆ” ಎಂದರು.
ಹೈದರಾಬಾದ್‌ನಿಂದ ಆಗಮಿಸಿದ್ದ ಮೀಡಿಯಾ ವಿಂಗ್‌ನ ಉಪಾಧ್ಯಕ್ಷೆ ಬಿ.ಕೆ. ಸರಳಾ ಅಕ್ಕನವರು ಆಶೀರ್ವಚನ ನೀಡಿ, “ಈ ಸಭೆಗೆ ಸ್ವತಃ ಭಗವಂತನೇ ನಿಮ್ಮನ್ನು ಆಹ್ವಾನಿಸಿದ್ದಾನೆ. ಮಾಧ್ಯಮವು ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಸಂಪರ್ಕ ಹೊಂದಿದೆ. ಜನರು ನಿಮ್ಮನ್ನು ಪ್ರೀತಿಸುತ್ತಾರೆ, ಆದ್ದರಿಂದ ನೀವು ಏನನ್ನು ಉಣಬಡಿಸುತ್ತೀರೋ ಅದನ್ನು ವಹಿಸಬಲ್ಲದು” ಎಂದು ಹೇಳಿದರು.ರಾಯ್‌ಪುರದಿಂದ ಬಂದಿದ್ದ ‘ಭಾರತ್ ಎಕ್ಸ್‌ಪ್ರೆಸ್’
ಚಾನೆಲ್‌ನ ಸ್ಥಳೀಯ ಸಂಪಾದಕಿ ಪ್ರಿಯಾಂಕಾ ಕೌಶಲ್ ಮಾತನಾಡಿ, “ಸಮಾಜವು ನಮ್ಮನ್ನು ನಂಬಬೇಕಾದರೆ, ನಾವು ನಮ್ಮ ನಡವಳಿಕೆಯನ್ನು ಅಷ್ಟೇ ಪರಿಶುದ್ಧವಾಗಿ ಮಾಡಿಕೊಳ್ಳಬೇಕು” ಎಂದರು.
‘ಯೂನಿಯನ್ ಆಫ್ ಜರ್ನಲಿಸ್ಟ್’ ಪಾಲಂಪುರ್ ಅಧ್ಯಕ್ಷ ಸಂಜೀವ್ ಬಾಗ್ಲಾ ಮಾತನಾಡಿ, “ಆಧ್ಯಾತ್ಮಿಕತೆಗೆ ಸಂಬಂಧಿಸಿದ ಬ್ರಹ್ಮಾಕುಮಾರೀಸ್ ಸಹೋದರಿಯರು ನಮ್ಮನ್ನು ಆಹ್ವಾನಿಸಿದ್ದು ನನಗೆ ತುಂಬಾ ಸಂತೋಷ ತಂದಿದೆ. ನಾವು ನಕಾರಾತ್ಮಕ ಮತ್ತು ಸಕಾರಾತ್ಮಕ ಎರಡೂ ರೀತಿಯ ಸುದ್ದಿಗಳನ್ನು ಬರೆಯಬೇಕಾಗುತ್ತದೆ. ನಾವು ಸುದ್ದಿಯನ್ನಂತೂ ನೀಡುತ್ತಿದ್ದೇವೆ, ಆದರೆ ಅದರ ಮುಂದಿನ ಬೆಳವಣಿಗೆಯನ್ನು ಗಮನಿಸುತ್ತಿಲ್ಲ, ಇದರಿಂದಾಗಿ ಸುದ್ದಿಯ ಒಂದು ಪಾರ್ಶ್ವ ಮಾತ್ರ ಜನರ ಮುಂದೆ ಬರುತ್ತಿದೆ” ಎಂದು ಅಭಿಪ್ರಾಯಪಟ್ಟರು.
‘ಛತ್ತೀಸ್‌ಗಢ ಬಂಧು’ (ರಾಯ್‌ಪುರ) ಸಂಪಾದಕ ಮಧುಕರ್ ದ್ವಿವೇದಿ ಮಾತನಾಡಿ, “ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಪತ್ರಕರ್ತರ ಪಾತ್ರ ತುಂಬಾ ದೊಡ್ಡದಾಗಿದೆ. ಜಿಲ್ಲಾ ಮಟ್ಟದ ಪತ್ರಕರ್ತರು ಭಾರತೀಯ ಪತ್ರಿಕೋದ್ಯಮದ ಆತ್ಮವಿದ್ದಂತೆ. ನಾವು ನಿಷ್ಪಕ್ಷಪಾತ, ನಿರ್ಭೀತ ಮತ್ತು ಧೈರ್ಯಶಾಲಿಗಳಾಗಿರಬೇಕು ಎಂದು ಸಾರ್ವಜನಿಕರು ನಮ್ಮಿಂದ ಅಪಾರ ನಿರೀಕ್ಷೆ ಹೊಂದಿದ್ದಾರೆ” ಎಂದರು.
ಹೈದರಾಬಾದ್‌ನಿಂದ ಆಗಮಿಸಿದ್ದ ಮೀಡಿಯಾ ವಿಂಗ್‌ನ ಉಪಾಧ್ಯಕ್ಷೆ ಬಿ.ಕೆ. ಸರಳಾ ಅಕ್ಕನವರು ಆಶೀರ್ವಚನ ನೀಡಿ, “ಈ ಸಭೆಗೆ ಸ್ವತಃ ಭಗವಂತನೇ ನಿಮ್ಮನ್ನು ಆಹ್ವಾನಿಸಿದ್ದಾನೆ. ಮಾಧ್ಯಮವು ಪ್ರತಿಯೊಬ್ಬ ವ್ಯಕ್ತಿಯೊಂದಿಗೆ ಸಂಪರ್ಕ ಹೊಂದಿದೆ. ಜನರು ನಿಮ್ಮನ್ನು ಪ್ರೀತಿಸುತ್ತಾರೆ, ಆದ್ದರಿಂದ ನೀವು ಏನನ್ನು ಉಣಬಡಿಸುತ್ತೀರೋಅದನ್ನು ಅವರು ಸ್ವೀಕರಿಸುತ್ತಾರೆ” ಎಂದು ಹೇಳಿದರು.
ದೆಹಲಿಯಿಂದ ಆಗಮಿಸಿದ್ದ ಹಿರಿಯ ರಾಜಯೋಗಿ ಶಿಕ್ಷಕಿ ಬ್ರಹ್ಮಾಕುಮಾರಿ ಸುನಿತಾ ದೀದಿ ಅವರು ಎಲ್ಲರಿಗೂ ಶಕ್ತಿಶಾಲಿ ರಾಜಯೋಗದ ಅನುಭೂತಿ ಮಾಡಿಸಿದರು. ಕೆಲ ನಿಮಿಷಗಳ ಧ್ಯಾನದ ಅಭ್ಯಾಸವು ಪತ್ರಕರ್ತ ಬಂಧುಗಳಿಗೆ ಆಳವಾದ ಶಾಂತಿಯ ಅನುಭೂತಿಯನ್ನು ನೀಡಿತು.
ಮೀಡಿಯಾ ವಿಂಗ್ ಛತ್ತೀಸ್‌ಗಢದ ರಾಜ್ಯ ಸಂಯೋಜಕಿ ಬಿ.ಕೆ. ಮಂಜು ದೀದಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದರು. ಬಂದಿರುವ ಅತಿಥಿಗಳಿಗೆ ಸ್ವಾಗತ ಬ್ರಹ್ಮ ಕುಮಾರ್ ವಿಶ್ವಾಸ್ ಧಾರವಾಡ ಇವರು ಮಾಡಿದರೆ, ಕೈಲಾಶ ಮಾನಸಸರೋವರ ಕೇಂದ್ರದ ಮುಖ್ಯ ಕಾರ್ಯದರ್ಶಿ ತಿಲಕ ರಾಜ ಅವರು ವಂದನಾರ್ಪಣೆ ಮಾಡಿದರು.

ಸುದ್ದಿ ಮತ್ತು
ಜಾಹೀರಾತಿಗಾಗಿ ಸಂಪರ್ಕಿಸಿ
6360866626

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE